

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 263 Friday 08-03-2024 Page: 4 Price : Rs. 1/-



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

E-mail : maruti.b.hosamani76@gmail.com


## ಮಾ.9 ರಂದು ಸುಳ್ಳು ಹೇಳುವುದರಲ್ಲಿ ಯಾರು ನಿಸ್ಸೀಮರು ಗಂಡನಿಗೆ....? ಹೆಂಡತಿಯೋ....? ಹರಟೆ ಕಾರ್ಯಕ್ರಮ

**ಹುನಗುಂದ** : ಪಟ್ಟಣದ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘ ಹಾಗೂ ಹೊನ್ನಗುಂದ ಸಂಸ್ಕೃತಿ ಬಳಗ ಸಹಯೋಗದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾ.9 ರ ಶನಿವಾರ ದಂದು ವಿಜಯ ಮಹಾಂತೇಶ ಪ್ರೌಢ ಶಾಲೆಯ ಆವರಣದಲ್ಲಿ ಸುಳ್ಳು ಹೇಳುವುದರಲ್ಲಿ ಯಾರು ನಿಸ್ಸೀಮರು ಗಂಡನೋ..? ಹೆಂಡತಿಯೋ..? ಎನ್ನುವ ವಿಷಯದ ಮೇಲೆ ಹರಟೆ ಕಾರ್ಯಕ್ರಮ ಜರುಗಲಿದೆ ಎಂದು ವಿ.ಮ ಸಂಘದ ಗೌರವ ಕಾರ್ಯದರ್ಶಿ ಡಾ.ಮಹಾಂತೇಶ ಕಡಪಟ್ಟಿ ಹೇಳಿದರು.

ಮಂಗಳವಾರ ಪಟ್ಟಣದ ವಿ.ಮ.ವಿ.ವ ಸಂಘದ ಕಾರ್ಯಾಲಯದಲ್ಲಿ ಕರೆದ ಪತ್ರಕಾಗೋಷ್ಠಿಯಲ್ಲಿಮಾತನಾಡಿದಅವರು,



ಚಿತ್ತರಗಿ ಸಂಸ್ಥಾನ ಮಠದ ಗುರುಮಹಾಂತ ಶ್ರೀಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿಕೊಳ್ಳಲಿದ್ದು.ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿದ್ದಾರೆ. ಗೌರವ ಕಾರ್ಯದರ್ಶಿ ಡಾ.ಮಹಾಂತೇಶ ಕಡಪಟ್ಟ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ,ಅಮೀನಗಡದ ಸಂಗಮೇಶ್ವರ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಆರ್.ಜಿ.ಸನ್ನಿ. ಹಿರಿಯ ವೈದ್ಯ ಡಾ.ಎನ್.ಆರ್.ವನಕಿ, ಎಸ್.ವಿ.ಎಂ.ಪದವಿ ಕಾಲೇಜು ಪ್ರಾಚಾರ್ಯ ಎಸ್.ಎಸ್.ಅವಟಿ,ಸ್ಪಂದನ ಕಾಲೇಜ ಪ್ರಾಚಾರ್ಯ ಅಮರೇಶ ಕೌದಿ,ಹೊಸಬ ಸದಸ್ಯ ವಾದಿರಾಜ ಗುಡ್ಡದ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.ಇನ್ನು ಹರಟೆ ಕಾರ್ಯಕ್ರಮದ ಸಭಾಪತಿಗಳಾಗಿ ಡಾ.ವಿಶ್ವನಾಥ ವಂಶಾಕೃತಮಠ ವಹಿಸಲಿದ್ದು. ಡಾ.ನಾಗರತ್ನಾ ಭಾವಿಕಟ್ಟಿ,ಡಾ.ಶಿವಗಂಗಾ ರಂಜನಗಿ,ಕಾವ್ಯಾ ಅಗಸಿಮುಂದಿನ ಹೆಂಡತಿ ಪರವಾಗಿ ಮಾತನಾಡಲಿದ್ದು.ಸಂಗಣ್ಣ ಮುಡಪಲದಿನ್ನಿ,ಚಂದ್ರಶೇಖರ ಹೆಗಡೆ, ಮಹಾಂತೇಶ ಹಳ್ಳೂರ ಗಂಡನ ಪರವಾಗಿ ಮಾತನಾಡಲಿದ್ದಾರೆ.ಪಟ್ಟಣದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಹಾಂತೇಶ ಅಗಸಿಮುಂದಿನ,ರವಿ ಹುಚನೂರ, ಅರಣೋದಯ ದುದ್ಗಿ,ಈರಣ್ಣ ಬೊಳಟಗಿ,ವೀರೇಶ ಕುರ್ತಕೋಟಿ,ರಾಜು ಗುಡ್ಡದ,ಇಬ್ರಾಹಿಂ ನಾಯಕ ಸೇರಿದ್ದಂತೆ ಅನೇಕರು ಇದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ.ಬಂಡರಗಲ್ಲ.ಹುನಗುಂದ**

## ಹೆಣ್ಣು ಹುಣ್ಣಲ್ಲ ಹೊನ್ನು.....



ಪ್ರತಿ ಮನೆಯ ಮನಸಿನ ನಂದಾದೀಪ ಹೆಣ್ಣು
ನೆನಪಿರಲಿ ಅವಳೊಂದಿಗೂ ಸಮಾಜದ ಕಣ್ಣು
ಯಾರೊ ಮೂರ್ಖರಂದರು ಮಹಿಳೆಯು ಹುಣ್ಣು
ಸ್ತ್ರೀಯನು ದೂಷಿಸಿದರೆ ಸೇರಬೇಕಾಗುವುದು ಮಣ್ಣು

ಸಿಗಬೇಕಾಗಿದೆ ಸ್ವಾತಂತ್ರ್ಯ ಪ್ರತಿಯೊಬ್ಬ ಹೆಣ್ಣಿಗೆ
ಎಷ್ಟು ಕೆಲಸ ಮಾಡಿದರೂ ಇಲ್ಲ ನೆಮ್ಮದಿ ಮನಸ್ಸಿಗೆ
ನಿಷ್ಕಲ್ಮಶವಾದ ಪ್ರೀತಿ ಅಡಗಿದೆ ಹೃದಯದೊಳಗೆ
ಗುಡಿಯ ಕಟ್ಟಿ ಪೂಜಿಸಿ ಸ್ತ್ರೀಯ ತ್ಯಾಗದ ಮಹಿಮೆಗೆ

ಮಹಿಳಾ ಸಮಾನತೆ ಕೇವಲ ಭಾಷಣಕ್ಕಾಗದಿರಲಿ
ಮಹಿಳೆ ಅಬಲೆ ಅಲ್ಲ ಸಬಲೆ ಗೊತ್ತಿರಲಿ
ಹೆಣ್ಣಿರದೆ ಗಂಡು ಶೂನ್ಯ ಎಂಬುದು ತಿಳಿದಿರಲಿ
ಹೆಣ್ಮಕ್ಕಳ ಮನಸ್ಸಿಗೆ ನೋವಾಗದಂತೆ ಇರಲಿ

ಕರುಣೆಗೆ ಮಮತೆಗೆ ತಾಯಿಯಾಗಿ ಹೆಣ್ಣು
ಪ್ರೀತಿಗೆ ಬಾಳಿಗೆ ಮಡದಿಯಾಗಿ ಹೆಣ್ಣು
ಬಾಂಧವ್ಯಕ್ಕೆ ಋಣಾನುಬಂಧಕ್ಕೆ ಮಗಳಾಗಿ ಹೆಣ್ಣು
ಪವಿತ್ರ ಹಬ್ಬ ರಕ್ಷಾಬಂಧನಕ್ಕೆ ಸೋದರಿಯಾಗಿ ಹೆಣ್ಣು

ಬದುಕಲು ಬಿಡಿ ಅವಳ ಪಾಡಿಗೆ ಅವಳನ್ನು
ಅವಳಿಗೂ ಒಂದು ಕ್ಷಣ ನೀಡಿ ಸ್ವಾತಂತ್ರ್ಯವನ್ನು
ಹಿರಿಯರೇ ಹೇಳಿದ್ದಾರೆ ಹೆಣ್ಣು ಹುಣ್ಣಲ್ಲ ಹೊನ್ನು
ಕೈ ಮುಗಿದು ನಮಸ್ಕರಿಸಿ ಹೆಣ್ಣು ಜಗದ ಕಣ್ಣು

– ಶ್ರೀ ಮುತ್ತು.ಯ.ವಡ್ಡರ (ಶಿಕ್ಷಕರು)
ಬಾಗಲಕೋಟ
ಮೊ.: 9845568484

## ಇಂದು ನೂತನ ಬಸವ ಮಹಾಂತ ಪತ್ತಿನ ಸಂಘದ ಉದ್ಘಾಟನೆ

**ಹುನಗುಂದ** : ಬಸವ ಮಹಾಂತ ಪತ್ತಿನ ಸಹಕಾರಿ ಸಂಘ ನಿಯಮಿತ ನೂತನ ಸಹಕಾರಿ ಬ್ಯಾಂಕ್ ಮಾ.8 ರ ಶುಕ್ರವಾರ ಬೆಳಗ್ಗೆ 10.30 ಗಂಟೆಗೆ ಪಟ್ಟಣದ ವಿಜಯ ಮಹಾಂತೇಶ ಹೈಸ್ಕೂಲ್ ಮಳಗಿಯಲ್ಲಿ ಉದ್ಘಾಟನೆ ನಡೆಯಲಿದೆ ಎಂದು ಬಸವ ಮಹಾಂತ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಹೂಗಾರ ಹೇಳಿದರು. ಪಟ್ಟಣದ ವಿ.ಮ ಪ್ರೌಢ ಶಾಲೆಯ ಮಳಗಿಯಲ್ಲಿ ಬಸವ ಮಹಾಂತ ಪತ್ತಿನ ಸಹಕಾರಿ ಸಂಘದ ಕಾರ್ಯಾಲಯದಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ



ಮಾತನಾಡಿದ ಅವರು,ಚಿತ್ತರಗಿ ಸಂಸ್ಥಾನ ಮಠದ ಗುರುಮಹಾಂತ ಶ್ರೀಗಳು ಹಾಗೂ ಗಚ್ಚಿನಮಠದ ವೇ.ಮೂ. ಮಹಾಂತಯ್ಯ ಗಚ್ಚಿನಮಠ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನುವಹಿಸಿ ಕೊಳ್ಳಲಿದ್ದಾರೆ. ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ನೂತನ ಸಹಕಾರಿ ಸಂಘವನ್ನು ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಹೂಗಾರ ಅಧ್ಯಕ್ಷತೆಯನ್ನು ವಹಿಸಿ ಕೊಳ್ಳಲಿದ್ದಾರೆ ಎಂದು ತಿಳಿಸಿದರು. ನಿರ್ದೇಶಕ ಜೈನಸಾಬ ಹಗೇದಾಳ ಮಾತನಾಡಿ ನೂತನ ಸಹಕಾರಿ ಸಂಘ 511 ಸದಸ್ಯರನ್ನು ಹೊಂದಿದ್ದು, 11.7 ಲಕ್ಷ ಮೂಲ ಬಂಡವಾಳದೊಂದಿಗೆ ಬ್ಯಾಂಕ್ ಕಾರ್ಯಾ ರಂಭವಾಗಲಿದೆ ಎಂದರು. ಈ ಸಂದರ್ಭದಲ್ಲಿ ಬಸವ ಮಹಾಂತ ಪತ್ತಿನ ಸಹಕಾರಿ ಸಂಘ ನಿಯಮಿತದ ಉಪಾಧ್ಯಕ್ಷ ಮೌನೇಶ ಕಮ್ಮಾರ,ನಿರ್ದೇಶಕರಾದ ಮಹಾಂತೇಶ ಪರೂತಿ, ಮಹಾಂತೇಶ ನಾಡಗೌಡ್ರ, ಯಲ್ಲಪ್ಪ ನಡುವಿನಮನಿ, ಗೌಡಪ್ಪ ಗೌಡರ, ಸತೀಶ ಶೆಟ್ಟಿ,ಪೂಜಾ ಹುದ್ದಾರ, ಶಿವಕುಮಾರ ತೋಟಗೇರ, ಸಾವಿತ್ರಮ್ಮ ಗಗ್ಗರಿ,ಮಧು ಪಾಟೀಲ, ಸರಸ್ವತಿ ಕೆಲೂರ, ಲಕ್ಷ್ಮಿ ನಾಡಗೌಡ್ರ ಹಾಗೂ ಸಂಘದ ವ್ಯವಸ್ಥಾಪಕ ಮಣಿಕಂಠ ಕಾಜಗಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ.ಎಂ.ಬಂಡರಗಲ್ಲ. ಹುನಗುಂದ**

## ಪಾರದರ್ಶಕವಾಗಿ ಮನೆಗಳ ಹಂಚಿಕೆ



**ರಬಕವಿ–ಬನಹಟ್ಟಿ :** ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಆಶ್ರಯದಲ್ಲಿ ನಿರ್ಮಾಣಗೊಂಡ ಮನೆಗಳನ್ನು ಪಾರದರ್ಶಕವಾಗಿ ಮತ್ತು ಯಾವುದೇ ಫಲಾನುಭವಿಗಳಿಗೆ ಅನ್ಯಾಯವಾಗದಂತೆ ಹಂಚಿಕೆ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಈ ದಿಶೆಯಲ್ಲಿ ಫಲಾನುಭವಿಗಳು ಸೂಕ್ತ ಮಾರ್ಗದರ್ಶನ ನೀಡಬಹುದಾಗಿದೆ ಎಂದು ಶಾಸಕ ಸಿದ್ದೂ ಸವದಿ ತಿಳಿಸಿದರು. ಶನಿವಾರ ಇಲ್ಲಿನ ಸರ್ಕಾರಿ ಡಿಪ್ಲೊಮಾ ಕಾಲೇಜು ಹತ್ತಿರ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಆಶ್ರಯದಲ್ಲಿ ನಿರ್ಮಾಣಗೊಂಡ ಮನೆಗಳ ಹಂಚಿಕೆಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

408 ಮನೆಗಳಲ್ಲಿ ಈಗ 72 ಮನೆಗಳನ್ನು ಹಂಚಿಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಮನೆಗಳನ್ನು ಜಿ + 1 ಮಾದರಿಯಲ್ಲಿ ನಿರ್ಮಾಣ ಮಾಡಲಾಗಿದ್ದು ಚೀಟಿ ಎತ್ತುವುದರ ಮೂಲಕ ಫಲಾನುಭವಿಗಳ ಎದುರಲ್ಲಿಯೇ ಆಯ್ಕೆ ಮಾಡಲಾಗುವುದು. ತೇರದಾಳ ಮತಕ್ಷೇತ್ರದ ರಬಕವಿ ಬನಹಟ್ಟಿ ನಗರಸಭೆಯ ವ್ಯಾಪ್ತಿಯಲ್ಲಿ 550, ಮಹಾಲಿಂಗಪುರ ಪುರಸಭೆಯಲ್ಲಿ 550 ಮನೆಗಳು ಮತ್ತು ತೇರದಾಳ ಪುರಸಭೆಯ ವ್ಯಾಪ್ತಿಯಲ್ಲಿ ಮುನ್ನೂರು ಮನೆಗಳನ್ನು ನಿರ್ಮಾಣ ಮಾಡಲಾಗುವುದು.

ಮುಂದಿನ ದಿಗಗಳಲ್ಲಿ ಈ ಪ್ರದೇಶದಲ್ಲಿ ಮೂಲ ಸೌಕರ್ಯಗಳನ್ನು ನೀಡಲು ಒತ್ತಾಯ ಮಾಡಲಾಗುವುದು ಮತ್ತು ಕ್ಷೇತ್ರದಲ್ಲಿರುವ ಉಳಿದ ಬಡವರಿಗೆ ಮನೆಗಳನ್ನು ನಿರ್ಮಾಣ ಮಾಡಲು ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಸಚಿವರಿಗೆ ಮನವಿ ಮಾಡಿಕೊಳ್ಳಲಾಗುವುದು. ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡವರು ಅವುಗಳನ್ನು ಉತ್ತಮ ರೀತಿಯಲ್ಲಿ ವಿನಿಯೋಗ ಮಾಡಿಕೊಳ್ಳಬೇಕು ಎಂದು ಶಾಸಕ ಸಿದ್ದೂ ಸವದಿ ತಿಳಿಸಿದರು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಎಂಜಿನಿಯರ್ ಶಿವಾನಂದ ರಾಠೋಡ ಮಾತನಾಡಿದರು.

ಪೌರಾಯುಕ್ತ ಜಗದೀಶ ಈಟಿ, ಸಂಜಯ ತೆಗ್ಗಿ , ಶ್ರೀಶೈಲ ಬೀಳಗಿ , ಗೌರಿ ಮಿಳ್ಳಿ , ಶಶಿಕಲಾ ಸಾರವಾಡ, ದೀಪಾ ಕೊಣ್ಣೂರ, ದುರ್ಗವ್ವ ಹರಿಜನ, ಜಯಶ್ರೀ ಬಾಗೇವಾಡಿ, ಯಲ್ಲಪ್ಪ ಕಟಗಿ, ಶಿವಾನಂದ ಬುದ್ನಿ , ವಿಜಯ ಕಲಾಲ, ಮಹಾದೇವ ಕೋಟ್ಯಾಳ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ತೇರದಾಳ ಠಾಣೆ ವ್ಯಾಪ್ತಿ ರಬಕವಿಯಲ್ಲಿ ಘಟನೆ

### ಜೂಜಾಟ ಅಡ್ಡೆ ಮೇಲೆ ಬಾಗಲಕೋಟೆ ಪೊಲೀಸರ ದಾಳಿ

**ತೇರದಾಳ :** ತೇರದಾಳ ಪೊಲೀಸ್ ಠಾಣೆ ವ್ಯಾಪ್ತಿಯ ರಬಕವಿ ಪಟ್ಟಣದ ಸನ್‌ಸೈನ್ ಲ್ಯಾಬೋರಟರಿ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ಜೂಜಾಟ ಆಡುತ್ತಿದ್ದ ಅಡ್ಡೆ ಮೇಲೆ ಬಾಗಲಕೋಟೆ ಸಿಇಎನ್ ಪೊಲೀಸರು ದಾಳಿ ನಡೆಸಿದ ಘಟನೆ ಶುಕ್ರವಾರ ಸಂಜೆ 5.30ರ ವೇಳೆಗೆ ನಡೆದಿದೆ.

ಜೂಜಾಟ ಆಡುತ್ತಿದ್ದ ತೇರದಾಳದ ರವಿ ಗುರಲಿಂಗಪ್ಪ ಔರಸಂಗ(36), ಸದಾಶಿವ ಪರಪ್ಪ ಕಾಗಿ(31), ರಬಕವಿಯ ಯಾಕೂಬ ಅಬ್ಬಾಸ ಮುಲ್ಲಾ(36), ಹಳಿಂಗಳಿಯ ನಾಗಪ್ಪ ಕಲ್ಲಪ್ಪ ತಳವಾರ(31), ಬನಹಟ್ಟಿಯ ಇಮಾಮ ಗುಡುಸಾಬ ಗಡ್ಡೇಕರ((38), ವಿಶ್ವನಾಥ ಬಸವರಾಜ ಜಾಡಗೌಡರ(39), ಕಾಡಪ್ಪ ಹನಮಂತ ಕರಿಗಾರ(45) ಜೂಜಾಟ ಆಡುತ್ತಿದ್ದ ಆರೋಪಿಗಳು. ಆರೋಗಳಿಂದ 16500 ನಗದು ಹಣ ವಶಪಡಿಸಿಕೊಳ್ಳಲಾಗಿದ್ದು, ಈ ಕುರಿತು ತೇರದಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪ ಹಿನ್ನಲೆಯಲ್ಲಿಯೇ ದಾಳಿ!–ಬುಧವಾರ ಬಾಗಲಕೋಟೆಯಲ್ಲಿ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ನಡೆದ ಎಸ್ಸಿ/ಎಸ್ಟಿ ಸಮುದಾಯಗಳ ಕುಂದು ಕೊರತೆ ಸಭೆಯಲ್ಲಿ ತೇರದಾಳದಲ್ಲಿ ಅಕ್ರಮ ಚಟುವಟಿಕೆಗಳು ಎಗ್ಗಿಲ್ಲದೆ ನಡೆಯುತ್ತಿವೆ. ಇದಕ್ಕೆ ಮೊದಲು ಕಡಿವಾಣ ಹಾಕಿ ಎಂದು ದೂರುಗಳು ಹೇಳಿದ ಬೆನ್ನಲ್ಲೆ ಶುಕ್ರವಾರ ಬಾಗಲಕೋಟೆ ಸಿಇಎನ್ ಪೊಲೀಸರು ಜೂಜಾಟ ಅಡ್ಡೆ ಮೇಲೆ ದಾಳಿ ನಡೆಸಿರುವುದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಅಲ್ಲದೆ ತೇರದಾಳ ಪೊಲೀರು ದಾಳಿ ನಡೆಸದೆ ಬಾಗಲಕೋಟೆಯಿಂದ ವಿಶೇಷ ತಂಡ ಆಗಮಿಸಿರುವುದು ಸಭೆಯಲ್ಲಿ ಹೇಳಿದ ದೂರುಗಳಿಗೆ ಪುಷ್ಟಿ ನೀಡಿವೆ.

ರಾಜಕೀಯ ಮುಖಂಡರುಗಳ ಕೈವಾಡ!–ಏತನ್ಮಧ್ಯೆ ತೇರದಾಳ ಪೊಲೀಸ್ ಠಾಣೆಯಲ್ಲಿ ಕೇಳಿ ಬರುತ್ತಿರುವ ಅಕ್ರಮ ಚಟುವಟಿಗಳಿಗೆ ಆಡಳಿತ ಹಾಗೂ ವಿರೋಧ ಪಕ್ಷದ ರಾಜಕೀಯ ಮುಖಂಡುರಗಳ ಹೆಸರುಗಳು ಸಾರ್ವಜನಿಕ ವಲಯದಲ್ಲಿ ವ್ಯಾಪಾಕವಾಗಿ ಕೇಳಿ ಬರುತ್ತಿದೆ. ಮಟ್ಕಾ, ಜೂಜಾಟ ಬೇಕಾ ಬಿಟ್ಟಿಯಾಗಿ ನಡೆಯುತ್ತಿದ್ದು, ಇದಕ್ಕೆ ಸ್ಥಳೀಯ ಪೊಲೀಸರು ಕಡಿವಾಣ ಹಾಕುವ ಕೆಲಸ ಮಾಡಬೇಕಿದೆ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ಕನ್ನಡ ನಾಮಫಲಕ: ಗಡುವು ವಿಸ್ತರಣೆಗ ಬೇಡ



**ರಬಕವಿ–ಬನಹಟ್ಟಿ :** ತಾಲೂಕಿನ ಎಲ್ಲಾ ಅಂಗಡಿ ಮಳಿಗೆಗಳ ಫಲಕಗಳಲ್ಲಿ ಶೇ.60 ರಷ್ಟು ಕನ್ನಡ ಭಾಷೆಗೆ ಪ್ರಾಧಾನ್ಯತೆ ಇರಬೇಕೆಂಬ ನಿಯಮದ ಗಡುವು ವಿಸ್ತರಣೆಗೆ ಕರವೇ ತಾಲೂಕಾ ಪ್ರಧಾನ ಕಾರ್ಯದರ್ಶಿ ಬಸೀರ ಜಮಾದಾರ ಅಸಮಾಧಾನ ವ್ಯಕ್ತಪಡಿಸಿದರು.

ಫೆಬ್ರುವರಿ 28 ರ ರಾತ್ರಿ ತನಕ ಗಡುವು ಅಂದಿದ್ದ ಸರ್ಕಾರ, ಒಮ್ಮೆಲೇ ಮತ್ತೆರಡು ವಾರ ಗಡುವು ನೀಡಿದ್ದಾರೆ. ಈ ರೀತಿ ಗಡುವು ವಿಸ್ತರಣೆಗೆ ಅವಕಾಶ ನೀಡಿದ್ದಲ್ಲಿ ನಿಯಮ ಸಡಿಲಿಕೆಗೆ ಅವಕಾಶ ನೀಡಿದಂತಾಗುತ್ತದೆ. ತಾಲೂಕಾಡಳಿತ ಖಡಕ್ ಎಚ್ಚರಿಕೆ ನೀಡುವ ಮೂಲಕ ಅಂಗಡಿಕಾರ–ರಿಗೆ ನಾಮ ಫಲಕಗಳಲ್ಲಿ ಶೇಕಡಾ ಅರವತ್ತುರಷ್ಟು ಕನ್ನಡ ಭಾಷೆಗೆ ಪ್ರಾಧಾನ್ಯತೆ ನೀಡುವ ಕು–ರಿತು ಸೂಚನೆ ನೀಡಬೇಕೆಂದರು. ಈ ಕುರಿತು ಸ್ಥಳೀಯ ಪೌರಾಯುಕ್ತರಿಗೆ ಮನವಿ ನೀಡಿದ ಕರವೇ ಸಂಘಟನೆ ಸರ್ಕಾರದ ನಿಯಮ ಚಾಚೂ ತಪ್ಪದೆ ಪಾಲಿಸುವ ಮೂಲಕ ಕನ್ನಡಾಭಿಮಾನ ಮೆರೆಯಬೇಕೆಂದು ಜಮಾದಾರ ತಿಳಿಸಿದ್ದಾರೆ.

ಈ ಸಂದರ್ಭ ಕರವೇ ಜಿಲ್ಲಾ ಉಪಾಧ್ಯಕ್ಷೆ ರಾಜೇಶ್ವರಿ ಹಿರೇಮಠ, ವಹಿದಾ ನದಾಫ್, ಮಲಿಕ್ ಜಮಾದಾರ, ಸಿರಾಜ್ ಗೈಬುಸಾಬ, ಮಲ್ಲು ಭಂಡಾರಿ, ರೇಷ್ಮಾ , ಲಕ್ಷ್ಮೀ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ನೇಕಾರರಿಗೂ ಸೌಲಭ್ಯ ಕೊಡಿ

**ರಬಕವಿ–ಬನಹಟ್ಟಿ :** ರಾಜ್ಯ ಸರ್ಕಾರ ಬಜೆಟ್ ನಲ್ಲಿ ನೇಕಾರರನ್ನು ನಿರ್ಲಕ್ಷಿಸಿದ್ದು, ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ಕಾರ್ಮಿಕ ಸೌಲಭ್ಯಗಳನ್ನು ನೇಕಾರರಿಗೂ ವಿಸ್ತರಿಸಬೇಕು. ಕೈಮಗ್ಗ ಮತ್ತು ಜವಳಿ ಇಲಾಖೆಗೆ ಕನಿಷ್ಠ 1,500 ಕೋಟಿಗಳ ಅನುದಾನ ಒದಗಿಸಬೇಕೆಂದು ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ರಾಜ್ಯಾಧ್ಯಕ್ಷ ಶಿವಲಿಂಗ ಟಿರಕಿ ಹೇಳಿದರು.

ಅವರು ಶನಿವಾರ ಬನಹಟ್ಟಿಯ ಕಾಡಸಿದ್ಧೇಶ್ವರ ದೇವಸ್ಥಾನದಲ್ಲಿ ನಡೆದ ನೇಕಾರರ ಸಭೆಯಲ್ಲಿ ಸದರಿ ವಿಷಯಗಳ ಚರ್ಚೆಯಲ್ಲಿ ಭಾಗಿಯಾಗಿ ಮಾತನಾಡಿದರು. ರಾಜ್ಯದಲ್ಲಿ ಸಾಲದ ಹೊರೆಯಿಂದ 47 ಜನ ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದರು, ಅವರ ಕುಟುಂಬಕ್ಕೆ ಪರಿಹಾರ ಒದಗಿಸಿ ಮುಂದೆ ಇಂತಹ ಪ್ರಕರಣಗಳು ಮರುಕಳಿಸದಂತೆ ತಡೆಯಬೇಕು. ಒಂದು ಬಾರಿ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಮತ್ತು ನೇಕಾರ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೂ ಯಾವುದೇ ಅನುದಾನ ನೀಡದೇ,



ಮುಖ್ಯಮಂತ್ರಿಸಿದ್ದರಾಮಯ್ಯನೇಕಾರರನ್ನು ಸಂಪೂರ್ಣವಾಗಿ ನಿರ್ಲಕ್ಷ್ಯಗೊಳಿಸಿದ್ದು , ಜವಳಿ ಸಚಿವರು ಹಾಗೂ ಕಾರ್ಮಿಕ ಸಚಿವರು ನೇಕಾರರ ಪಾಲಿಗೆ ಇದ್ದೂ ಇಲ್ಲದಂತಾಗಿದ್ದಾರೆ ಎಂದರು.

ಹೆಚ್ಚುವರಿ ಬಾಕಿ ಬಿಲ್ಲನ್ನು ಸರ್ಕಾರ ಭ–ರಿಸಬೇಕೆಂದು ಮತ್ತು 10 ಎಚ್.ಪಿ. ಯಿಂದ 20 ಎಚ್.ಪಿ. ವರೆಗೆ ಕೇವಲ ರೂ. 1.25 ಯುನಿಟ್ ನಂತೆ ವಿದ್ಯುತ್ ಒದಗಿಸಬೇಕೆಂದು ಈಗಾಗಲೇ ಹಲವಾರು ಬಾರಿ ಬೆಂಗಳೂ–ರಿನ ಫ್ರೀಡಂ ಪಾರ್ಕಿನಲ್ಲಿ ಹೋರಾಟ ಮಾಡಿದ್ದರೂ ಕೂಡ, ನೇಕಾರರನ್ನು ಒಡೆದು ಆಳುವ ನೀತಿಯನ್ನು ಸರಕಾರ ಅನುಸರಿಸುತ್ತಿದ್ದು ಈ ಅನ್ಯಾಯ ಖಂಡಿಸಿ ಬರಲಿರುವ ಮಾರ್ಚ್ ಏಳರಂದು ಬೃಹತ್ ಸಂಖ್ಯೆಯಲ್ಲಿ ವಿಧಾನಸೌಧ ಚಲೋ ಮೂಲಕ ನೇಕಾರರ ಹೋರಾಟ ನಡೆಸುವುದಾಗಿ ತಿಳಿಸಿದ್ದಾರೆ. ನೇಕಾರ–ರಿಗೆ ಆಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಬೇಕೆಂದು ಸರಕಾರಕ್ಕೆ ಒತ್ತಾಯ ಮಾಡಲು ರಾಜ್ಯದ ಎಲ್ಲ ಜಿಲ್ಲೆಗಳಿಂದ ನೇಕಾರರನ್ನು ಒಗ್ಗೂಡಿಸಿ ಬೃಹತ್ ಹೋರಾಟಕ್ಕೆ ಮುಂದಾಗಿದ್ದು , ಸರ್ಕಾರ ನಮ್ಮ ಹಕ್ಕುಗಳನ್ನು ಈಡೇರಿಸಲೇಬೇಕೆಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲು ಇಂದಿನ ಸಭೆಯಲ್ಲಿ ನಿರ್ಣಯಿಸಲಾಗಿದೆ ಎಂದರು.

ರಾಜ್ಯದ ಎಲ್ಲ ನೇಕಾರರು, ಸಮುದಾಯಗಳ ಗುರುಗಳು, ಸಮುದಾಯಗಳ ನಾಯಕರು ಎಲ್ಲ ನೇಕಾರ ಸಂಘ ಸಂಸ್ಥೆಯವರು ಇದರಲ್ಲಿ ಭಾಗವಹಿಸಲು ಕರೆ ನೀಡಲಾಗಿದೆ ಎಂದು ರಾಜ್ಯಾಧ್ಯಕ್ಷ ಶಿವಲಿಂಗ ಟಿರಕಿ ಹೇಳಿದರು.

ಸಭೆಯಲ್ಲಿ ರಬಕವಿ, ಬನಹಟ್ಟಿ , ತೇರದಾಳ, ರಾಂಪುರ, ಹೊಸೂರ, ಮಹಾಲಿಂಗಪುರ, ತೇರದಾಳ ಹಾಗೂ ಇನ್ನೂ ಅನೇಕ ಭಾಗಗಳಿಂದ ನೇಕಾರರು ಭಾಗವಹಿಸಿದ್ದರು.

ಸಂಗಪ್ಪ ಉದಗಟ್ಟಿ, ಲಕ್ಕಪ್ಪ ಪವಾರ, ಆನಂದ ಜಗದಾಳ, ಆನಂದ ಜೀರಗಾಳ, ಮಹಾದೇವ ನುಚ್ಚಿ , ಪರಮಾನಂದ ಬಾವಿಕಟ್ಟಿ , ಗಂಗಪ್ಪ ವಂಟಗೋಡಿ ಸೇ–ರಿದಂತೆ ಅನೇಕರು ಭಾಗವಹಿಸಿದ್ದರು.

## ಕಾಡಸಿದ್ಧೇಶ್ವರ ಸೊಸೈಟಿ: ಅಂಬಲಿ ಬಣಕ್ಕೆ ಗೆಲುವು



**ರಬಕವಿ–ಬನಹಟ್ಟಿ :** ಅಮೃತ ಮಹೋತ್ಸವ ಆಚರಿಸಿರುವ ಶ್ರೀ ಕಾಡಸಿದ್ಧೇಶ್ವರ ವಿದ್ಯುತ್ ಚಾಲಿತ ಮಗ್ಗಗಳ ಸಹಕಾರಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ , ರಾಜು ಅಂಬಲಿ ಬಣದ ಸದಸ್ಯರ ಕೈವಶವಾಗುವಲ್ಲಿ ಯಶಸ್ವಿಯಾಗಿದೆ.

ಒಟ್ಟು ಹನ್ನೆರಡು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಒಂಭತ್ತು ಸದಸ್ಯರು ಅಂಬಲಿ ಹಾಗು ಹಳ್ಯಾಳ ಬಣದ ಮೂವರು ಸದಸ್ಯರು ಗೆಲುವಿನ ನಗೆ ಬೀರಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಅಶೋಕ ಬಾಣಕಾರ, ಶಂಕರಯ್ಯ ಕಾಡದೇವರ, ಈರಪ್ಪ ಬರಗಲ್, ಶಂಕರ ಕೆಸರಗೊಪ, ಚನಮಲ್ಲಪ್ಪ ಬೀಳಗಿ, ಶೇಖರ ಹಕ್ಕಲದಡ್ಡಿ, ಶಶಿಧರ ಬೀಳಗಿ, ಹಿಂದುಳಿದ ವರ್ಗ ಅ ದಿಂದ ಮೋಹನ ಬೀಳಗಿ, ಹಿಂದುಳಿದ ವರ್ಗ ಬ ದಿಂದ ಆನಂದ ರೇವಣಸಿದ್ದಯ್ಯಗೋಳ, ಮಹಿಳಾ ವಿಭಾಗದಿಂದ ಅಶ್ವಿನಿ ಈಶ್ವರ ಅಂಬಲಿ, ಮಂಜುಳಾ ರಮೇಶ ಮಂಡಿ, ಪರಿಶಿಷ್ಠ ಜಾತಿಯಿಂದ ವಿಲಾಸ ಪೂಜಾರಿ ಗೆಲುವು ಸಾಧಿಸಿದ್ದಾರೆಂದು ಚುನಾವಣಾಧಿಕಾರಿ ಟಿ.ಎಂ. ಮಾಳಿ ತಿಳಿಸಿದರು.

ರಾಜು ಅಂಬಲಿ, ಮಲ್ಲು ಬಾಣಕಾರ, ರಾಜು ಕೊಕಟನೂರ, ಕುಮಾರ ಕದಮ್, ಪ್ರವೀಣ ಕೋಲಾರ, ರಾಜೇಂದ್ರ ಭದ್ರನ್ನವರ, ಚಂದ್ರು ಕುಲಗೋಡ, ಶಶಿ ಕುಳ್ಳಿ , ಅಜಯ ಬಾಣಕಾರ, ಬಸವರಾಜ ಮೋಟಗಿ, ಷಣ್ಮುಖ ಬಾಡಗಂಡಿ, ಬಸು ಬರಗಲ್ ಸೇರಿದಂತೆ ಅನೇಕರು ಉಪಸ್ಥಿತ–ರಿದ್ದರು.

**ಕೊನೆಯ ಎಣಿಕೆ:** ಚುನಾವಣೆಗೆಂದು ನ್ಯಾಯಾಲಯ ಮೆಟ್ಟಿಲೇರಿದ್ದ ಸೊಸೈಟಿಯ ಮತ ಎಣಿಕೆ ಕಾರ್ಯವು ಎರಡೂವರೆ ತಿಂಗಳಷ್ಟು ವಿಳಂಬವಾಗಿತ್ತು. ತಾಲೂಕಿನಲ್ಲಿಯೇ ಚುನಾವಣೆ ನಂತರದ ಮತ ಎಣಿಕೆಯಲ್ಲಿ ಕೊನೆಯದಾಗಿ ಉಳಿದಿದ್ದ ಸೊಸೈಟಿಗೆ ಕೊನೆಗೂ ಶನಿವಾರ ಮತ ಎಣಿಕೆ ನಡೆಯಿತು.

### ಪುರಾತನ ದೇವಸ್ಥಾನ ಶ್ರೀ ಪರ್ವತಮಲ್ಲಯ್ಯ ದೇವಸ್ಥಾನದಲ್ಲಿ ಲಿಂಗು ಪುನರ್ ಪ್ರತಿಷ್ಠಾಪನೆ

# ಇಡೀ ವಿಶ್ವವೇ ಭಾರತಕಡೆಗೆ ನೋಡುವಂತಾಗಿದೆ-ಸಿದ್ಧಲಿಂಗಶ್ರೀ

**ತಾಳಿಕೋಟೆ :** ಈ ಹಿಂದೆ ಒಂದು ಕಾಲದಲ್ಲಿ ಇಡೀ ವಿಶ್ವವೇ ಗ್ರೀಕ್ ದೇಶದ ಕಡೆಗೆ ನೋಡುತ್ತಿತ್ತು ಆದರೆ ಭಾರತ ದೇಶದಲ್ಲಿ ಶರಣರ, ಸತ್ಪುರುಷರು ಬಿತ್ತಿ ಹೋದ ಸನಾತನ ಪರಂಪರೆಯ ಫಲವಾಗಿ ಇಡೀ ವಿಶ್ವವೇ ಭಾರತದೆಡೆಗೆ ನೋಡುವಂತಾಗಿದೆ ಎಂದು ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ನುಡಿದರು.

ಪಟ್ಟಣದ ಪುರಾತನ ದೇವಸ್ಥಾನವಾದ ಶ್ರೀ ಪರ್ವತ ಮಲ್ಲಯ್ಯ ದೇವಸ್ಥಾನದಲ್ಲಿ ಶ್ರೀ ಮಲ್ಲಿಕಾರ್ಜನ ಈಶ್ವರ ಲಿಂಗು ಪುನರ್ ಪ್ರತಿಷ್ಠಾಪನಾ ಸಮಾರಂಭದಲ್ಲಿ ದಿವ್ಯ ಸಾನಿದ್ಯ ವಹಿಸಿ ಮಾತನಾಡುತ್ತಿದ್ದ ಅವರು ಶ್ರೀಶೈಲ ಚನ್ನಮಲ್ಲಿಕಾರ್ಜುನ, ಅಕ್ಕಮಹಾದೇವಿ, ಅಲ್ಲದೇ ಅನೇಕ ಸತ್ಪುರುಷರು ಭಾಳಿ ಬೆಳಗಿದ ಈ ಭಾರತ ದೇಶದ ಪುಣ್ಯಭೂಮಿ ಇಂದು ಇಡೀ ವಿಶ್ವದಲ್ಲಿ ಪ್ರಜ್ವಲಿಸುತ್ತಿದೆ ನಮ್ಮ ದೇಶದ ಸನಾತನ ಧರ್ಮದ ಪರಂಪರೆಯನ್ನು ಎಲ್ಲ ದೇಶಗಳು ಮೆಚ್ಚಿಕೊಂಡಿವೆ ಮತ್ತು ಅನುಸರಿಸುತ್ತಿವೆ ಇಂತಹ ಧರ್ಮ ಪರಂಪರೆಯಲ್ಲಿರುವ ನಾವುಗಳು ಪುರಾತನ ದೇವಸ್ಥಾನಗಳನ್ನು ಜೀರ್ಣೋದ್ದಾರಗೊಳಿಸುವ ನಿಟ್ಟಿನಡೆಗೆ ಸಾಗುತ್ತಿರುವದು ಸಂತಸವಾಗಿದೆ ಎಂದ ಅವರು ಪೂರ್ವಿಕವಾದ ಶ್ರೀ ಪರ್ವತ ಮಲ್ಲಯ್ಯ ದೇವಸ್ಥಾದಲ್ಲಿ ಲಿಂಗು ಪುನರ್ ಪ್ರತಿಷ್ಠಾಪಿಸುವದರೊಂದಿಗೆ ದೇವಸ್ಥಾನದ ಜೀರ್ಣೋದ್ದಾರಕ್ಕೆ ಮುಂದಾಗಿರುವದು ಮೆಚ್ಚುವಂತಹದ್ದಾಗಿದೆ ಅಲ್ಲದೇ ಭಕ್ತಾಧಿಗಳಿಗೆ ಅನುಕೂಲ ಕಲ್ಪಿಸಿದಂತಾಗಿದೆ ಎಂದರು.



ಇನ್ನೋರ್ವ ಸಾನಿದ್ಯ ವಹಿಸಿದ ಗುಂಡಕನಾಳ ಬೃಹನ್ ಮಠದ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ನಮ್ಮ ದೇಶದ ಸನಾತನ ಪರಂಪರೆ ಉಳಿಯಬೇಕಾದರೆ ಮಠ ಮಾನ್ಯಗಳು ಜೀರ್ಣೋದ್ದಾರಗೊಳ್ಳುವದು ಅವಶ್ಯವಾಗಿದೆ ಮತ್ತು ಇದು ಪ್ರತಿಯೊಬ್ಬರ ಕರ್ತವ್ಯವಾಗಿದೆ ನೂರಾರು ವರ್ಷಗಳ ಇತಿಹಾಸ ಹೊಂದಿರುವ ಶ್ರೀ ಪರ್ವತ ಮಲ್ಲಯ್ಯ ದೇವಸ್ಥಾನವನ್ನು ವರ್ಷದಿಂದ ವರ್ಷಕ್ಕೆ ಎಲ್ಲ ಜನರು ಕೈ ಜೋಡಿಸಿ ಜಿರ್ಣೋದ್ದಾರ ಕೈಗೊಳ್ಳುತ್ತಾ ಸಾಗಿರುವದು ಮೆಚ್ಚುವಂತಹದ್ದಾಗಿದೆ ಈ ಭಾಗದ ಭಕ್ತರ ಆಶೆಯದಂತೆ ಪ್ರತಿವರ್ಷ ಈ ಭಾಗದ ಮೂಲಕ ತೆರಳುವ ಶ್ರೀಶೈಲ ಮಲ್ಲಿಕಾರ್ಜುನ ಕಂಬಿಗಳು ಈ ದೇವಸ್ಥಾನದಲ್ಲಿ ಮೊದಲು ಪೂಜೆ ಸಲ್ಲಿಸುವದರೊಂದಿಗೆ ಮುಂದೆ ಸಾಗುವಂತಹ ಪದ್ದತಿ ಮರುಕಳಿಸುವಂತಹ ಕಾರ್ಯ ನಡೆ-ಯಲಿ ಎಂದು ಆಶಿಸಿದರು.

ಕಾರ್ಯಕ್ರಮಕ್ಕೂ ಮೊದಲು ವೇ.ಸಿದ್ರಾಮಯ್ಯಸ್ವಾಮಿ ಬೇನಾಳಮಠ, ವೇ.ಬಸಯ್ಯ ಶಾಸ್ತ್ರೀಗಳು ಕೊಡೇಕಲ್ಲ, ವಿರೇಶ ಶಾಸ್ತ್ರೀಗಳು ಹುಣಸಗಿ, ಇವರಿಂದ ಗಂಗಾ ಪೂಜೆ, ಗಣಪತಿ ಪೂಜೆ, ಅಲ್ಲದೇ ನವಗ್ರಹ ಪೂಜೆಯೊಂದಿಗೆ ಪ್ರಾಣ ಪ್ರತಿಷ್ಠಾಪನಾ ಕಾರ್ಯಗಳನ್ನು ನೇರವೇರಿಸಲಾಯಿತು. ನಂತರ ರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಹಾ ಮಂಗಳಾರತಿ ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮದಲ್ಲಿ ಅತಿಥಿಗಳನ್ನು ದೇವಸ್ಥಾನ ಜೀರ್ಣೋದ್ದಾರ ಸಮಿತಿಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಮಯದಲ್ಲಿ ತಾಲೂಕಾ ತಹಶಿಲ್ದಾರ ಶ್ರೀಮತಿ ಕೀರ್ತಿ ಚಾಲಕ, ಡಾ.ಗಂಗಾಂಬಿಕಾ ಪಾಟೀಲ, ಅಶೋಕ ಹಂಚಲಿ, ಆರ್.ಎಲ್. ಕೊಪ್ಪದ, ಸಂಗನಗೌಡ, ಮಲ್ಲನಗೌಡ ಪಾಟೀಲ, ಚನಮಲ್ಲು ಕತ್ತಿ, ಅಣ್ಣು ವಾಲಿ, ಅರ್ಚಕರಾದ ನೀಲಕಂಠಯ್ಯಸ್ವಾಮಿ, ಮೊದಲಾದವರು ಇದ್ದರು.

# ಕರ್ನಾಟಕ ಸಂಭ್ರಮ 50: ಕಾಗವಾಡದಲ್ಲಿ ಜ್ಯೋತಿ ರಥಯಾತ್ರೆ ಅದ್ದೂರಿ ಸ್ವಾಗತ

**ಬೆಳಗಾವಿ :** ಕರ್ನಾಟಕ ಸಂಭ್ರಮ 50ರ ಅಂಗವಾಗಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಜ್ಯೋತಿ ರಥಯಾತ್ರೆಯು ಗುರುವಾರ (ಫೆ.29) ರಂದು ಬೆಳಗಾವಿ ಜಿಲ್ಲೆಯ ಕಾಗವಾಡ ತಾಲೂಕಿನಲ್ಲಿ ಕರ್ನಾಟಕ ಸುವರ್ಣ ಸಂಭ್ರಮ ಜ್ಯೋತಿರಥಯಾತ್ರೆಕ್ಕೆ ಎಮ್ ಆರ್ ಮುಂಜೆ ಅವರು ಪೂಜೆ ನೆರವೇರಿಸಿ, ಅದ್ದೂರಿಯಾಗಿ ಸ್ವಾಗತಿಸಿದರು.

ಈ ವೇಳೆ ತಹಸೀಲ್ದಾರ್ ಎಸ್. ಬಿ. ಇಂಗಳೆ, ಉಪ ತಹಸೀಲ್ದಾರ್ ಎ.ಎಸ್ ಕೋರೆ, ಕ್ಷೇತ್ರ ಶಿಕ್ಷಣಾಧೀಕಾರಿಗಳಾದ ಟಿ.ಎಸ್ ಪಟೇಲ್, ಸಮೂಹ ಸಂಪನ್ಮೂಲ ವ್ಯಕ್ತಿಗಳಾದ (CRP) ಕಾಗವಾಡ ಸಂಜುಕುಮಾರ್ ಸದಲಗೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿ (CDPO) ಎಮ್.ಆರ್ ಪಾಟೀಲ, ಎಮ್.ಎಸ್. ಗೋನಾಳ, ಪಟ್ಟಣ ಪಂಚಾಯತ್ ಮುಖ್ಯಧಿಕಾರಿ ಕೆ. ಕೆ. ಗಾವಡೆ, ಕಂದಾಯ ನಿರೀಕ್ಷಕ ಎಸ್.ಬಿ ಮುಲ್ಲಾ, ಶಿವಗೌಡ ಕಾಗೆ ಉಪಸ್ಥಿತರಿದ್ದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮೆರವಣಿಗೆ ತಂಡಗಳು, ಕನ್ನಡ ಪರ ಸಂಘಟನೆ ಪದಾಧಿಕಾರಿಗಳು, ಶಾಲಾ-ಕಾಲೇಜ ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು ಭಾಗವಹಿಸಿದ್ದರು.

# ಬೆಕ್ಕಿನಕೇರಿಯಲ್ಲಿ ಲಕ್ಷ್ಮೀ ದೇವಿ ಮಂದಿರ ಉದ್ಘಾಟಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್

**ಬೆಳಗಾವಿ :** ಬೆಳಗಾವಿ ಗ್ರಾಮೀಣ ಕ್ಷೇತ್ರದ ಬೆಕ್ಕಿನಕೇರಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡ ಶ್ರೀ ಲಕ್ಷ್ಮೀ ದೇವಿ ಮಂದಿರದ ವಾಸ್ತುಶಾಂತಿ ಹಾಗೂ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಭಾಗವಹಿಸಿ, ದೇವಸ್ಥಾನವನ್ನು ಉದ್ಘಾಟಿಸಿದರು.

ಗ್ರಾಮೀಣ ಕ್ಷೇತ್ರದಲ್ಲಿ ನೂರಕ್ಕೂ ಹೆಚ್ಚು ದೇವಸ್ಥಾನಗಳನ್ನು ಕಳೆದ 6 ವರ್ಷದಲ್ಲಿ ನಿರ್ಮಾಣ ಮಾಡಲಾಗಿದೆ. ಗ್ರಾಮೀಣ ಕ್ಷೇತ್ರದ ಚಿತ್ರಣ ಈ ಅವಧಿಯಲ್ಲಿ ಸಾಕಷ್ಟು ಬದಲಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರವನ್ನು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಲಾಗುವುದು. ಗ್ರಾಮೀಣ ಮಕ್ಕಳು ಉನ್ನತ ಶಿಕ್ಷಣ ಪಡೆಯುವಂತಹ ವಾತಾವರಣ ನಿರ್ಮಾಣ ಮಾಡಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಈ ಸಂದರ್ಭದಲ್ಲಿ ಭರವಸೆ ನೀಡಿದರು.



ಕಾರ್ಯಕ್ರಮದಲ್ಲಿ ಯುವರಾಜ ಕದಂ, ಜಯವಂತ ಸಾವಂತ, ನಾರಾಯಣ ಬಂಡಾರಗೆ, ಅರುಣ ಗಾವಡೆ, ಮಾರುತಿ ಖಾದರವಾಡ್ಕರ್, ನಾರಾಯಣ ಸಾವಂತ, ಮಲ್ಲಪ್ಪ ಗಾವಡೆ, ಗಾವಡು ಗಾವಡೆ, ನಾಗೇಶ ಬಾಳೇಕುಂದ್ರಿ, ನಾರಾಯಣ ಬಾಳೇಕುಂದ್ರಿ, ನಾರಾಯಣ ಬೆಳಗಾಂವ್ಕರ್, ಮಹಾದೇವ ಬಿ. ಚಬ್ಬುಬಾಯಿ ಕಾಂಬಳೆ, ಅರುಣ ಬೋಗನ್, ಮಲಪ್ರಭಾ ಗಾವಡೆ, ಬೇಬಿತಾಯಿ ಗಾವಡೆ, ಲಕ್ಷ್ಮೀ ಗಾವಡೆ, ಎಸ್. ಎಲ್. ಚೌಗುಲೆ, ಕಲ್ಪನಾ ಕಾಂಬಳೆ, ರಘುನಾಥ್ ಖಂಡೇಕರ್, ಮನೋಹರ್ ಬೆಳಗಾಂವ್ಕರ್, ಬಾಳಕೃಷ್ಣ ತೆರಸೆ ಹಾಗೂ ದೇವಸ್ಥಾನ ಸಮಿತಿಯ ಸದಸ್ಯರು ಇದ್ದರು.

# ಆಹಾರ ಕಲಬೆರಕೆಗೆ 6 ತಿಂಗಳು ಜೈಲು ಶಿಕ್ಷೆ: ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ

**ಬೆಳಗಾವಿ :** ಜನರಿಗೆ ಸುರಕ್ಷಿತವಲ್ಲದ ಆಹಾರ ಪೂರೈಸಿಸುವವರಿಗೆ ಆಹಾರ ಹಾಗೂ ಹಾಲಿನ ಕಲಬೆರಕೆ ಮಾಡುವವರಿಗೆ 6 ತಿಂಗಳ ಜೈಲು ವಾಸ ಹಾಗೂ 5 ಲಕ್ಷದ ವರೆಗೆ ಧಂಡ ವಿಧಿಸಲಾಗುತ್ತದೆ. ಜಿಲ್ಲೆಯ ಎಲ್ಲ ಆಹಾರ ವಹಿವಾಟು ಮಾಡುವವರು, ಹೋಟೆಲ ಮಾಲೀಕರು ಆಹಾರ ತಯಾರಿಸುವವರು, ಹಾಲಿನ ಉತ್ಪಾದಕರು ಹಾಗೂ ಇತರೆ ಯಾವುದೇ ಆಹಾರ ವರ್ತಕರು ಕಡ್ಡಾಯವಾಗಿ ಎಫ್.ಎಸ್.ಎಸ್.ಎ ಅಡಿಯಲ್ಲಿ ನೋಂದಣಿ ಪರವಾಣಿಗೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ವಿಜಯಕುಮಾರ ಹೊನಕೇರಿ ಎಚ್ಚರಿಕೆ ನೀಡಿದರು.

ಆಹಾರ ಸುರಕ್ಷತ ಮತ್ತು ಗುಣಮಟ್ಟ ಕಾಯ್ದೆ ಪರಿಣಾಮಕರಿಯಾಗಿ ಕಾರ್ಯಗತಗೊಳಿಸುವ ನಿಟ್ಟಿನಲ್ಲಿ Eat Right Challange ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲಾಮಟ್ಟದ ಸಲಹಾ ಸಮಿತಿ ಆಶ್ರಯದಲ್ಲಿ ಮಂಗಳವಾರ (ಫೆ.20) ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಅಂಗನವಾಡಿ, ರೇಷನ ಅಂಗಡಿ, ಎಸ್‌ಟಿ, ಎಸ್‌ಸಿ, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತ ಹಾಸ್ಟೆಲ್, ಪಡಿತರ ವಿತರಣಾ ಕೇಂದ್ರ, ಪಿಜಿ ಕೇಂದ್ರಗಳು, ಔಷದಿ ಮಳಿಗೆಗಳು ಇಲ್ಲಿಯವರೆಗೆ ಶೇಕಡಾ 90 ರಷ್ಟು ನೋಂದಣಿ ಪರವಾಣಿಗೆ ಪಡೆದಿರುವುದಿಲ್ಲ. ಇಂತವರು ಸುರಕ್ಷಿತ ಆಹಾರ ಪೂರೈಸಿಸಬೇಕು. ಎಲ್ಲ ಅಧಿಕಾರಿಗಳು ಸಹ ಈ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಸೂಚಿಸಿದರು.

ಅದೇ ನಿಟ್ಟಿನಲ್ಲಿ ಎಫ್.ಎಸ್.ಎಸ್.ಎ ಬೆಳಗಾವಿ, ಜಿಲ್ಲಾ ಅಂಕಿತ ಅಧಿಕಾರಿಗಳಾದ ಡಾ. ಜಗದೀಶ ಜಿಂಗಿ ಅವರು ಮಾತನಾಡಿ, ಸುರಕ್ಷಿತವಲ್ಲದ ಆಹಾರ, ಆಹಾರವೇ ಅಲ್ಲ. ಆಹಾರವು ಕೇವಲ ಎಲೆಯಲ್ಲಿ ಊಟ ಬಡಿಸುವುದಲ್ಲ,

ಮನಸ್ಸು ಹಾಗೂ ದೇಹದ ಆರೋಗ್ಯ-ಕ್ಕೆ ಹಿತಕರವಾಗಿರಬೇಕು. ನಾವು ಸೇವಿಸುವ ಆಹಾರ ಜನರಿಗೆ ಹಾಗೂ ಪರಿಸರಕ್ಕೆ ಹಿತಕರವಾಗಿರಬೇಕು. ಸುರಕ್ಷಿತ ಮತ್ತು ಆರೋಗ್ಯಕರ ಆಹಾರ ಸಾಮಾನ್ಯ ಜನರಿಗೆ ತಲುಪಬೇಕು. ಬಳಕೆದಾರನ ಅಪೇಕ್ಷಗೆ ತಕ್ಕಂತೆ ಆರೋಗ್ಯಕ್ಕೆ ಹಾನಿಕಾರಕವಲ್ಲದ ಆಹಾರ ಪೂರೈಸಿಸಬೇಕು. ಉತ್ಪಾದನೆ, ಸಂಸ್ಕರಣೆ, ವಿತರಣೆ, ಸಾಗಾಣಿಕೆ, ಮಾರಾಟ ಎಲ್ಲಾ ಹಂತಗಳಲ್ಲೂ ಸುರಕ್ಷಿತವಾಗಿ, ಉತ್ಪಾದನೆಯಿಂದ ಉಣ್ಣುವವರೆಗೆ ಆಹಾರ ಸುರಕ್ಷತ ವಹಿಸಬೇಕು ಎಂದರು.

11 ಜಿಲ್ಲೆಗೆ ಇಚಿಣ ಖಿರ್ಝಣ ಝಚಿಟ-ಟಜಟಿರಜ ಕಾರ್ಯಕ್ರಮ ನಿರ್ವಹಣೆಗಾಗಿ ಪ್ರತಿ ಜಿಲ್ಲೆಗೆ ರೂ. 5 ಲಕ್ಷ ಬಿಡುಗ-'ಡೆ ಮಾಡಲಾಗಿದ್ದು, ನಮ್ಮ ಜಿಲ್ಲೆಯ ಜಿಲ್ಲಾ ಮಟ್ಟದ ಸಲಹಾ ಸಮಿತಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷರಾಗಿರುವುದರಿಂದ ಈ ಮೊತ್ತವನ್ನು ಮಾರ್ಗಸೂಚಿಯ ಪ್ರಕಾರ ವೆಚ್ಚ ಮಾಡಲು ಅಪರ ಜಿಲ್ಲಾಧಿಕಾರಿಗಳ ಅನುಮತಿ ಪಡೆಯಲಾಯಿತು ಎಂದು ಹೇಳಿದರು.

ಈ ವೇಳೆ ಹೋಟೆಲ ಮಾಲಿಕರ ಸಂಘದ ಅಧ್ಯಕ್ಷರಾದ ವಿಜಯ ಸಾಲಿಯಾನ ಮತ್ತು ಅಜಯ ಪೈ, ಕೃಷಿ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕಿನ ಆಹಾರ ಸುರಕ್ಷತಾಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಪಾರಿಜಾತ ರಂಗಭೂಮಿ ಸೃಷ್ಟಿಕರ್ತ ಕುಲಗೋಡ ತಮ್ಮಣ್ಣ: ಡಾ. ರಾಜು ಕಂಬಾರ



**ಮೂಡಲಗಿ :** ಕೃಷ್ಣ ಪಾರಿಜಾತ ರಂಗಭೂಮಿಯ ಸೃಷ್ಟಿಕರ್ತ ಕುಲಗೋಡ ತಮಣ್ಣಪ್ಪ ತಿಳಿಯ ಜಾಣ-ರಿಗೆ ಕೃಷ್ಣ ಕಥೆಯನ್ನು ತಿಳಿಯ ಹೇಳಿದ ವೈಷ್ಣವ ಪಂಥದ ಶ್ರೇಷ್ಠ ಭಕ್ತನಾಗಿದ್ದಾನೆ. ಎಂದು ಸಾಹಿತಿ ರಾಮದುರ್ಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕನ್ನಡ ಉಪನ್ಯಾಸಕ ಡಾ ರಾಜು ಕಂಬಾರ ಹೇಳಿದರು. ಸಮೀಪದ ಕುಲಗೋಡ ಗ್ರಾಮದಲ್ಲಿ ಶನಿವಾರ ಪಾರಿಜಾತ ಪಿತಾಮಹ ಕುಲಗೋಡ ತಮ್ಮಣ್ಣ ಪ್ರತಿಷ್ಠಾನ, ಕುಲಗೋಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳಗಾವಿ ಇವರ ಸಂಂ-ಮುಕ್ತ ಆಶ್ರಯದಲ್ಲಿ ಜರುಗಿದ ಪಾರಿಜಾತ ಉತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದರು,

ಆಧುನಿಕ ಕಾಲಘಟ್ಟದಲ್ಲಿ ಜನಪದ ಕಲೆ-ಬೈಲಾಟಗಳು ನಶಿಸುತ್ತಿವೆ. ಹಿರಿಯರ ಜನಪದ ಕಲೆ ಬೈಲಾಟಗಳಲ್ಲಿ ವೈಜ್ಞಾನಿಕ, ವೈಚಾರಿಕ ಆಧ್ಯಾತ್ಮಿಕತೆಯ ಅಂಶಗಳಿವೆ. ಇಂಥ ಜನಪದ ಕಲೆ-ರಂಗಭೂಮಿಗೆ ಅಪಾರ ಕೊಡುಗೆ ಸಲ್ಲಿಸಿದ ಕಲಾವಿದ- ನಾಟಕಕಾರರ ಹುಟ್ಟೂರಲ್ಲಿ ಅವರ ಸ್ಮರಣೆಗಾಗಿ ಸ್ಮಾರಕಗಳು ನಿರ್ಮಾಣವಾಗಲಿ ಎಂದರು.

ಕುಲಗೋಡ ಗ್ರಾಪಂ ಅಧ್ಯಕ್ಷ ತಮ್ಮಣ್ಣ ದೇವರು ಮತ್ತು ಶಿವನಗೌಡ ಪಾಟೀಲ ಜಂಟಿಯಾಗಿ ರಿಬ್ಬನ್ ಕತ್ತರಿಸಿ, ದೀಪ ಬೆಳಗಿಸುವುದರ ಮೂಲಕ ಪಾರಿಜಾತ ಉತ್ಸವವನ್ನು ಉದ್ಘಾಟಿಸಿದರು.

ಅತಿಥಿಯಾಗಿ ಆಗಮಿಸಿದ ಶಿಕ್ಷಕ ನಾಗಪ್ಪ ಗಡಾದ ಮಾತನಾಡಿದರು.

ಅಧ್ಯಕ್ಷತೆಯನ್ನು ಗ್ರಾಮದ ಮುಖಂಡ ಶ್ರೀಕಾಂತ ನಾಯಿಕ ಅಧ್ಯಕ್ಷತೆ ವಹಿಸಿದ್ದರು.

ಜನಪದ ಹಾಡುಗಳಲ್ಲಿ ಪಾರಿಜಾತ ಕಲೆ ಹಂತಿ ಪದವನ್ನು ಹನುಮಂತ ಪಾಟೀಲ ಹಾಡಿದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಹಿತಿ ಕಲಾವಿದರು ಗಣ್ಯರನ್ನು ಪ್ರತಿಷ್ಠಾನದ ವತಿಯಿಂದ ಸತ್ಯ-ರಿಸಲಾಯಿತು. ಲೋಕಾಪುರದ ಸುನಂದಾ ಮ್ಯಾಗೇರಿ ದಿಗ್ದರ್ಶನದಲ್ಲಿ ಜ್ಞಾನೇಶ್ವರ ಕಲಾತಂಡದವರಿಂದ ಶ್ರೀ ಕೃಷ್ಣ ಪಾರಿಜಾತ ಬಯಲಾಟ, ಯಲ್ಲಾಲಿಂಗ ಭಜನಾ ಮಂಡಳಿ, ಗುರುರಾಜ ಭಜನಾ ಮಂಡಳಿ ಸೇರಿದಂತೆ ಹತ್ತು ಹಲವು ಕಲಾ ತಂಡಗಳಿಂದ ಜನಪದ ಕಲಾ ಪ್ರದರ್ಶನ ಜರುಗಿತು.

ಕಾರ್ಯಕ್ರಮದಲ್ಲಿ ಪಾರಿಜಾತ ಪಿತಾಮಹ ಕುಲಗೋಡ ತಮಣ್ಣ ಪ್ರತಿಷ್ಠಾನದ ಅಧ್ಯಕ್ಷ ರಮೇಶ ಕೌಜಲಗಿ, ಶಿರಶಿ -ಸಿದ್ದಾಪುರ ತೋಟಗಾರಿಕಾ ಸಹಾಯಕ ಅಧಿಕಾರಿ ರವಿ ಸೋಮಕ್ಕನವರ, ಪಿಕೆಪಿ-ಎಸ್ ಉಪಾಧ್ಯಕ್ಷ ರಾಮಣ್ಣ ಕುರುಬಚನ್ನಾಳ, ಮಹಾ ರುದ್ರಪ್ಪ ಯಕ್ಷಂಬಿ, ಮಾರುತಿ ಬಾಗಿಮನಿ, ಶಂಕರ ಹಾದಿಮನಿ, ಕಲಾವಿದ ಮಹಾಂತೇಶ ಅಂದಾನಿ ಸೇರಿದಂತೆ ಊರಿನ ಮುಖಂಡರು ಉಪಸ್ಥಿತರಿದ್ದರು.

# ಅಪರಿಚಿತ ಮೃತ ವ್ಯಕ್ತಿಯ ವಾರಸುದಾರರ ಪತ್ತೆಗೆ ನೆರವು

**ಬಾಗಲಕೋಟೆ :** ವಿಜಯಪುರ ರೈಲು ನಿಲ್ದಾಣದ ಹತ್ತಿರ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಓರ್ವ ಅಪ-ರಿಚಿತ ವ್ಯಕ್ತಿಯನ್ನು ಜಿಲ್ಲಾ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದಾಗ ಚಿಕಿತ್ಸೆ ಫಲಕಾರಿಯಾಗದೇ ಅಪ-ರಿಚಿತ ವ್ಯಕ್ತಿ ಮೃತಪಟ್ಟಿದ್ದು, ಮುಂದಿನ ಕ್ರಮಕ್ಕಾಗಿ ಪ್ರಕರಣ ದಾಖಲಿಸಿಕೊಂಡು ವಾರಸುದಾರರ ಪತ್ತೆಗೆ ತನಿಖೆಯಲ್ಲಿದೆ.



ಮೃತ ವ್ಯಕ್ತಿ 55 ರಿಂದ 60 ವರ್ಷದವರಾಗಿದ್ದು, 5.5 ಅಡಿ ಎತ್ತರ, ಸಾದಗಪ್ಪು ಮೈಬಣ್ಣ, ತೆಳ್ಳನೇಯ ಮೈಕಟ್ಟು ಹೊಂದಿದ್ದಾರೆ. ಹಾಪ್ ತೋಳಿನ ರೆಡಿಮೆಡ್ ಶರ್ಟ, ಚಾಕಲೆಟ್ ಬಣ್ಣದ ಪ್ಯಾಂಟ್ ಧ-ರಿಸಿದ್ದಾರೆ. ಈ ಚಹರೆಯುಳ್ಳ ವ್ಯಕ್ತಿಯ ವಾರಸುದಾರರು ಪತ್ತೆಯಾದಲ್ಲಿ ಆರಕ್ಷಕ ಉಪನಿರೀಕ್ಷಕರು, ರೇಲ್ವೆ ಪೊಲೀಸ್ ಠಾಣೆ ವಿಜಯಪುರ ದೂಸಂ.08352-250883, ಕಂಟ್ರೋಲ್ ರೂಂನಂ.080-22871291ಗೆ ಮಾಹಿತಿ ನೀಡುವಂತೆ ಪ್ರಕಟಣೆ ತಿಳಿಸಿದೆ.

# ನಗರಸಭೆಗೆ 4.03 ಲಕ್ಷ ಉಳಿತಾಯ ಬಜೆಟ್: ಪೌರಾಯುಕ್ತೆ ಲಕ್ಷ್ಮೀ

**ಜಮಖಂಡಿ :** ನಗರದ ಸರ್ವತೋಮುಖ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು 2848.37 ಲಕ್ಷ ರೂ.ಗಳ ಅಂದಾಜು ಆದಾಯ ನಿರೀಕ್ಷಿಸಲಾಗಿದೆ. ಅಂ-ದಾಜು 2844.34 ಲಕ್ಷ ರೂ.ಗಳ ವೆಚ್ಚ ಬಜೆಟ್‌ದಲ್ಲಿ 4.03 ಲಕ್ಷಗಳ ಉಳಿತಾಯ ಬಜೆಟ್‌ಗೆ ಅನುಮೋದನೆ ನೀಡಿ ಠರಾವು ಅಂಗೀಕರಿಸಿ ನಗರಸಭೆ 2024-25ನೇ ಸಾಲಿನ ಅಂದಾಜು ಆಯ-ವ್ಯಯಕ್ಕೆ ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ಅನುಮೋದನೆ ನೀಡಿದ್ದಾರೆ ಎಂದು ನಗರಸಭೆ ಪೌರಾಯುಕ್ತೆ ಲಕ್ಷ್ಮೀ ಅಷ್ಟಗಿ ಹೇಳಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರಸಭೆಗೆ ವಿವಿಧ ಮೂಲಗಳಿಂದ ಬರುವ ಸಂಪನ್ಮೂಲ ಹಾಗೂ ಸರ್ಕಾರದಿಂದ ಬರುವ ಅನುದಾನ ತೆಗೆದುಕೊಂಡು ನಗರದ ನಾಗರಿಕರಿಗೆ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸುವ ಹಿತದೃಷ್ಟಿಯಿಂದ ಆಯ-ವ್ಯಯದಲ್ಲಿ 2848.37 ಲಕ್ಷ ರೂ.ಗಳನ್ನು ಅನುಮೋದನೆಗೆ ನೀಡಲಾಗಿತ್ತು. ನಗರದ ಜನಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳ ನಿರ್ಮಾಣ, ಬಸ್ ನಿಲ್ದಾಣ, ರಸ್ತೆಗಳು, ಚರಂಡಿಗಳು ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪಗಳ ನಿರ್ವಹಣೆ, ನಗರದ ಉದ್ಯಾನವನಗಳ ಅಭಿವೃದ್ಧಿ ಸೇರಿದಂತೆ ನಗರದ ಸರ್ವತೋಮುಖ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು 2844.34 ಲಕ್ಷಗಳ ವೆಚ್ಚ ಅಂದಾಜಿಸಲಾಗಿದೆ ಎಂದರು.

ಎರಡನೇ ಸುತ್ತಿನ ಸಾರ್ವಜನಿಕ ಸಭೆ ಕರೆದು ಸಾರ್ವಜನಿಕರು ಸಂಘ-ಸಂಸ್ಥೆಗಳಿಂದ ನಗರಕ್ಕೆ ಅವಶ್ಯವಿರುವ ಸಲಹೆ ಸೂಚನೆಗಳನ್ನು ಪರಿಗಣನೆಗೆ ತೆಗೆದುಕೊಂಡು ಎಸ್.ಎಫ್.ಸಿ. ಯೋಜನೆಯಡಿಯಲ್ಲಿ ಬಿಡುಗಡೆ ಆಗಬಹುದಾದ ಅನುದಾನಕ್ಕೆ ನಿಯಮಾನುಸಾರ ಪ.ಜಾತಿ ಮತ್ತು ಪ.ಪಂ ಜನಾಂಗದ ಕಲ್ಯಾಣ-ಕ್ಕಾಗಿ ನಿಗಪಡಿಸಿದ ಶೇ.24.10, ಇತರೇ ಕಡುಬಡಜನರ ಕಲ್ಯಾಣಕ್ಕಾಗಿ ಶೇ. 7.25, ವಿಕಲಚೇತನರಿಗಾಗಿ ಶೇ.5 ರಷ್ಟು ಮೊತ್ತ ಕಾಯ್ದಿರಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕಛೇರಿ ವ್ಯವಸ್ಥಾಪಕ ಸಿ.ಎಲ್.ಬಿಳ್ಳೂರ, ಕಿರಿಯ ಅಭಿಯಂತರ ಕುಸಮಾ, ಲೇಖಪಾಲಕ ಸೋಮನಾಥ ದೇವರಮನಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜೆ.ಟಿ.ಪಾಟೀಲ ಭೂಮಿ ಪೂಜೆ

**ಬೀಳಗಿ :** ಪಟ್ಟಣದ ಸರ್ವತೋಮ್ಮುಖ ಅಭಿವೃದ್ಧಿ ಸದಾ ಸಿದ್ದ. ಪಟ್ಟಣ ಪಂಚಾಯ ತಿಯನ್ನು ಮೇಲ್ದರ್ಜೆಗೆ ಏರಿಸಿ ಪುರಸಭೆಗೆ ಮಾಡಲು ಸರ್ಕಾರ ಮಟ್ಟದಲ್ಲಿ ಪ್ರಸ್ತಾವಣೆ ಕಳಿಸಿಲಾಗಿದೆ. ಇದರಿಂದ ಇನ್ನೂ ಹೆಚ್ಚು ಅನುದಾನ ಬರುವುದಲ್ಲದೇ ಅಭಿವೃದ್ದಿಗೆ ಹೆಚ್ಚಿನ ಆಧ್ಯತೆ ದೊರೆಯಲಿದೆ ಎಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಜೆ.ಟಿ.ಪಾಟೀಲ ಹೇಳಿದರು.




ಪಟ್ಟಣದಲ್ಲಿ ಶುಕ್ರವಾರ 2024-25 ಸಾಲಿನ ಅನುದಾನದಲ್ಲಿ ಸುಮಾರು 2ಕೋಟಿ 40ಲಕ್ಷ ರೂಗಳ ವಿವಿಧ ಯೋಜನೆಯ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಈಗಾಗಲೇ 6ಕೋಟಿ ರೂಗಳ ಕಾಮಗಾರಿಗೆ ಮುಂಜೂರಾತಿ ದೊರತಿದೆ. ಅಲ್ಲದೇ ಪಟ್ಟಣದ ಜನತೆಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಈಗಾಗಲೇ ಕಾಮಗಾರಿ ಪ್ರಾರಂಭವಾಗಿದ್ದು ಪ್ರತಿಯೊಂದು ವಾರ್ಡ ಹಾಗೂ ಆಶ್ರಯ ಕಾಲೋನಿಯಲ್ಲಿ ಕುಡಿಯುವ ನೀರಿನ ಪೈಪಲೈನ್ ಕಾಮಗಾರಿ ಪ್ರಾರಂಭವಾಗಿದೆ. ಇನ್ನೂ ಒಂದು ವರ್ಷದೊಳಗೆ ಪಟ್ಟಣಕ್ಕೆ ಕುಡಿಯುವ ನೀರಿನ ಕಾಮಗಾರಿ ಪೂರ್ಣಗೊಳ್ಳಲಿದೆ. ಈಗಾಗಲೇ ಪಟ್ಟಣದ ಜನತೆಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಒಂದುದಿನ ಬಿಟ್ಟು ನೀರು ಪೂರೈಕೆ ಮಾಡುವಂತೆ ಅಧಿಕಾ-ರಿಗಳಿಗೆ ಸೂಚನೆ ನೀಡಲಾಗಿದೆ. ಸರ್ಕಾರಿ ಆಸ್ಪತ್ರೆ ಹತ್ತಿರದ ಆಶ್ರಯ ಕಾಲೋನಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಮಾಧ್ಯಮದವರು ಪ್ರಶ್ನೇ ಜಾತಿಗಣತಿ ಬಗ್ಗೆ ನಿಮ್ಮ ಅಭಿಪ್ರಾಯ ಏನು ಕೇಳಿದ ಪ್ರಶ್ನೆಗೆ ಶಾಸಕ ಜೆ.ಟಿ.ಪಾಟೀಲ ಉತ್ತರ ನೀಡಿ ನೋಡಿ ಜಾತಿ ಗಣತಿಯಿಂದ ಮುಖ್ಯಮಂತ್ರಿಗಳು ಯಾರಿಗೂ ಅನ್ಯಾಯ ಮಾಡುವುದಿಲ್ಲ. ಲೋಪ ದೀಷಗಳಿದ್ದರೆ ತಿದ್ದಿ ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತಾರೆ.

ಅಲ್ಲದೇ ಕಳೆದ ಲೋಕಸಮರದಲ್ಲಿ ಮೋದಿಜಿಯವರು ಹೇಳಿದ 15ಲಕ್ಷ ರೂಪಾಯಿಗಳು ಯಾರ ಖಾತೆಗೆ ಬಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿ ರಾಜ್ಯ ಬಿಜೆಪಿಯವರು ಅಧಿಕಾರ ಬಿಟ್ಟು ಹೋಗುವಾಗ ಸಾಲ ಮಾಡಿ ಹೋಗಿದ್ದಾರೆ ಈಗ ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ ಎಂದು ಹೇಳುವ ಹೇಳಿಕೆಯಲ್ಲಿ ಯಾವುದೇ ಹುರಳಿಲ್ಲ ಎಂದು ತಿರುಗೇಟು ನೀಡಿದರು. ಯಾರೆ ಸಾಲ ಮಾಡಿದರೂ ಸರ್ಕಾರ ಅದನ್ನು ತುರಿಸುವ ಕೆಲಸ ಮಾಡಬೇಕಾಗಿದೆ. 5 ಗ್ಯಾರೇಟಿ ಯೋಜೆಯಲ್ಲಿ ಸಾಕಷ್ಟು ಕುಟುಂಬಸ್ಥರು ಲಾಭ ಪಡೆಯುತ್ತಿದ್ದು ಬರುವ ಲೋಕಸಭೆ ಚುನಾವಣೆಯಲ್ಲಿ ಇದರ ಲಾಭ ತಟ್ಟಲಿದೆ. ಇದರ ಫಲಾನುಭವಿಗಳು ಕಾಂಗ್ರೆಸ್ ಪಕ್ಷದ ಕೈ ಬಿಡುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಾಗಲಕೋಟೆಯಿಂದ ಲೋಕಸಭೆಗೆ ಕಾಂಗ್ರೆಸ್ಸಿನಿಂದ ಟಿಕೆಟ್ ಯಾರಿಗಾದರೂ ಕೊಟ್ಟರು ಪ್ರಾಮಾಣಿಕವಾಗಿ ಕಾಂಗ್ರೆಸ್ ಪಕ್ಷದ ಗೆಲುವಿಗಾಗಿ ಶ್ರಮಿಸುವುದಾಗಿ ತಿಳಿಸಿದರು.

ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿ ದೇವಿಂದ್ರ ಧನಪಾಲ. ತಾಲೂಕ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತ ಕಾಖಂಡಕಿ. ಪಪಂ ಸದಸ್ಯ ಪಡಿಯಪ್ಪ ಕ-ರಿಗಾರ, ಅಜುಬಾಯಿ ಸರ್ಕಾರ, ಸಂಗಪ್ಪ ಕಂದಗಲ್. ಅಣವೀರಯ್ಯ ಪ್ಯಾಟಿ ಮಠ್. ರಮೇಶ್ ಭೀಮಪ್ಪ ನಾಯಿಕ್. ಬಸವರಾಜ ಹಳ್ಳದಮನಿ, ಚಿನ್ನಪ್ಪ ಬಂಡಿವಡ್ಡರ, ಶಿವಾನಂದ ಮಾದರ, ಸಿದ್ದು ಸಾರಾವರಿ. ಸಿದ್ದು ದಳವಾಯಿ. ರಾಜು ಬೋರ್ಜಿ, ನೂರಲಿ ತಹಶಿಲ್ದಾರ ಇದ್ದರು.


# ಸಾಮಾಜಿಕ ನ್ಯಾಯ ಭಿಕ್ಷೆಯಲ್ಲ, ಅದು ನಮ್ಮ ಹಕ್ಕು: ಮಹಾದೇವಿ ಮರೆಗುದ್ದಿ



**ಮುಧೋಳ :** ನಮ್ಮ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯವು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಯಾವುದೇ ಜಾತಿ, ವರ್ಣ, ಲಿಂಗ, ಧರ್ಮದ ಹೆಸರಿನಲ್ಲಿ ಭೇದಭಾವ ತೋರಬಾರದು. ಸಮಸ್ತ ಜನತೆಯ ಕಲ್ಯಾಣವೇ ಸರ್ಕಾರದ ಗುರಿ ಎಂದು ಗ್ರಾಮ ಪಂಚಾಯತ್ ಅಧ್ಯಕ್ಷೆ ಮಹಾದೇವಿ ಮರೆಗುದ್ದಿ ಅಭಿಪ್ರಾಯ ಪಟ್ಟರು. ಅವರು ತಾಲೂಕಿನ ಮುಗಳಖೋಡ ಗ್ರಾಮಕ್ಕೆ ಇತ್ತೀಚೆಗೆ ಆಗಮಿಸಿದ ಸಂವಿಧಾನ ಜಾಗ್ರತಿ ರಥ ಸ್ವಾಗತಿಸಿಕೊಂಡು ಸಂವಿಧಾನದ 75 ರ ಸಂಭ್ರಮ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಸಮಾನತೆ ಎಂದರೆ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಮನಾದ ಅವಕಾಶಗಳನ್ನು ನೀಡುವುದು. ಸಾಮಾಜಿಕ ನ್ಯಾಯವೆಂದರೆ ಹಿಂದುಳಿದವರ, ಬಡವರ, ದುರ್ಬಲರ, ತುಳಿತಕ್ಕೆ ಮತ್ತು ಶೋಷಣೆಗೆ ಒಳಗಾದ ಅಸಹಾಯಕರನ್ನು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಮೇಲಕ್ಕೆತ್ತಲು ಶಾಸನಗಳನ್ನು, ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿಗೊಳಿಸುವುದಾಗಿದೆ ಎಂದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರೋಹಿತ್ ಇಟಕನ್ನವರ ಮಾತನಾಡಿ ಸಂವಿಧಾನವನ್ನು ಓದಬೇಕು, ಅಥ-ರ್ೈಸಬೇಕು. ಅದರಂತೆ ನಡೆದುಕೊಳ್ಳಬೇಕು. ಸಂವಿಧಾನದ ಆಶಯಗಳನ್ನು ಬದುಕಿನ ವಿಧಾನವಾಗಿಸಿಕೊಳ್ಳಬೇಕು. ನಮ್ಮ ಕುಟುಂಬದ ಸದಸ್ಯರಿಗೆ ಸಂವಿಧಾನದ ಮಹತ್ವವನ್ನು ಮನವರಿಕೆ ಮಾಡಿಕೊಡಬೇಕು. ಸಂವಿಧಾನ ಎದುರಿಸುತ್ತಿರುವ ಸವಾಲುಗಳನ್ನು ಹಿಮ್ಮೆಟ್ಟಿಸಬೇಕು ಎಂದರು. ಈ ಸಮಾರಂಭದಲ್ಲಿ ಗ್ರಾಮ ಪಂಚಾಯಿತಿಯ ಸದಸ್ಯರು, ಗ್ರಾಮದ ಎಲ್ಲ ಪಂಚಾಯಿತಿ ವ್ಯಾಪ್ತಿಯ ಅಧಿಕಾರಿಗಳು, ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತರು, ಯುವಕರು, ಗ್ರಾಮದ ಹಿರಿಯರು ಪಾಲ್ಗೊಂಡಿದ್ದರು.

# ಮೃತ ರೈತ ಕುಟುಂಬಕ್ಕೆ 2 ಲಕ್ಷ ಪರಿಹಾರ

## ಕೇಂದ್ರ ಸರಕಾರದ ಯೋಜನೆಗಳು ರೈತರಿಗೆ ಅನುಕೂಲ



**ತೇರದಾಳ :** ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ ಹಲವು ಯೋಜನೆಗಳು ರೈತರಿಗೆ ಸಾಕಷ್ಟು ಅನುಕೂಲಕರವಾಗಿವೆ. ಅವುಗಳನ್ನು ರೈತರು ಸರಿಯಾಗಿ ಸದ್ಬಳಿಕೆ ಮಾಡಿಕೊಳ್ಳಬೇಕೆಂದು ಶಾಸಕ ಸಿದ್ದು ಸವದಿ ಹೇಳಿದರು.

ಇಲ್ಲಿನ ಬಸಪ್ಪ ಕೇದಾರಪ್ಪ ಅಥಣಿ ಅಪಘಾತ ಸಾವನ್ನಪ್ಪಿದ ಹಿನ್ನಲೆಯಲ್ಲಿ ಕೇಂದ್ರ ಸರಕಾರದ ಪಿಎಂಎಸ್‌ಪಿ ಯೋಜನೆಯಡಿ ಇಲ್ಲಿನ ಕಲ್ಲಟ್ಟಿ ಪಿಕೆಪಿಎಸ್ ಬ್ಯಾಂಕಿನಲ್ಲಿ ಮೃತ ರೈತ ಕುಟುಂಬಕ್ಕೆ 2 ಲಕ್ಷ ಪರಿಹಾರ ಚೆಕ್ ವಿತರಿಸಿ ಮಾತನಾಡಿದರು. ರೈತರು ಜಮೀನುಗಳಲ್ಲಿ ಕೆಲಸ ಮಾಡುವಾಗ ಸಾಕಷ್ಟು ಜಾಗೃತರಾಗಿ ಕೆಲಸ ಮಾಡಬೇಕು. ಕೆಲಸ ಮಾಡುವ ಆತುರದಲ್ಲಿ ಅಪಾಯವನ್ನು ಎಳೆದುಕೊಳ್ಳಬಾರದು ಎಂದು ಸಲಹೆ ಮಾಡಿದ ಅವರು, ರೈತರಿಗಾಗಿ ಕೇಂದ್ರ ಸರಕಾರ ಜಾರಿಗೆ ತಂದಿರುವ ಪಿಎಂಎಸ್‌ಪಿ ಯೋಜನೆ ವಿಮೆ ಕಂತು ಮೊದಲು 16 ರೂ ಇತ್ತು. ಈಗ ಅದನ್ನು 20 ರೂ ಗೆ ಹೆಚ್ಚಿಸಲಾಗಿದೆ. ಪ್ರತಿಯೊಬ್ಬ ರೈತರು ಕೇಂದ್ರ ಸರಕಾರದ ವಿಮೆಗಳನ್ನು ಮಾಡಿಕೊಳ್ಳಬೇಕೆಂದು ಹೇಳಿದರು. ಬ್ಯಾಂಕಿನ ಅಧ್ಯಕ್ಷ ಮಾರುತಿ ರೇಳೆಕರ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ನಿಂಗಪ್ಪಣ್ಣ ಮಾಲಗಾಂವಿ, ರಾಮಣ್ಣ ಹಿಡಕಲ್, ನರಸಪ್ಪ ಅಥ-ಣಿ, ಕ್ಷೇತ್ರ ಸಿಬ್ಬಂದಿ ಎಸ್.ಎಂ. ಶಿರೋಳ, ಬಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಮಹಾವೀರ ಜಮಖಂಡಿ, ಬಿಜೆಪಿ ನಗರ ಘಟಕ ಅಧ್ಯಕ್ಷ ಮಹಾವೀರ ಕೊಕಟನೂರ, ಪುರಸಭೆ ಸದಸ್ಯ ಸಂತೋಷ ಜಮಖಂಡಿ, ಬ್ಯಾಂಕಿನ ಕಾರ್ಯದರ್ಶಿ ಬಸವರಾಜ ಕಾಲತಿಪ್ಪಿ, ಸದಾಶಿವ ಹೊಸಮನಿ, ಶಂಕರ ಕುಂಬಾರ, ಸುರೇಶ ಪರೀಟ, ಪ್ರಭು ಅಮಾತ್ಯನವರ ಇದ್ದರು.

# ವಿದ್ಯುತ್ ಚಾರ್ಜ: ಸಾರ್ವಜನಿಕರಲ್ಲಿ ಮನವಿ

**ಬಾಗಲಕೋಟೆ :** ಜಮಖಂಡಿ ತಾಲೂಕಿನ 2*10 ಎಂ.ವಿ.ಎ, 110/11 ಕೆವಿ ಗೋಠೆ ವಿದ್ಯುತ್ ಉಪ ಕೇಂದ್ರದ ನಿರ್ಮಾಣ ಮತ್ತು ಪ್ರಸ್ತುತ 110 ಕೆವಿ ಸಾವಳಗಿ–ತೊದಲಬಾಗಿ ಒಂಟಿ ಮಾರ್ಗದಿಂದ 110 ಕೆವಿ ಒಳ ಕುಣಿಕೆ–ಹೊರ ಕುಣಿಕೆ ಮಾರ್ಗವನ್ನು 11.613 ಕಿ.ಮೀ ದೂರದವರೆಗೆ ನಿರ್ಮಿಸುವ ಕಾಮಗಾರಿಯು ಪೂರ್ಣಗೊಂಡಿದ್ದು, ಅದನ್ನು ಫೆಬ್ರವರಿ 24ರ ನಂತರ ಕಾರ್ಯಗತಗೊಳಿಸಲಾಗುತ್ತಿದೆ. ಈ ವಿದ್ಯುತ್ ಮಾರ್ಗವು ತೊದಲಬಾಗಿ, ಗದ್ಯಾಳ ಮತ್ತು ಗೋಠೆ ಗ್ರಾಮಗಳ ಸರಹದ್ದಿನಲ್ಲಿ ಹಾದು ಹೋಗುತ್ತದೆ.

ಸಾರ್ವಜನಿಕರು ಈ ವಿದ್ಯುತ್ ಮಾರ್ಗದಿಂದ ದೂರವಿರುವ ಜೊತೆಗೆ ದನ–ಕರಗಳನ್ನು ವಿದ್ಯುತ್ ಗೋಪುರಕ್ಕೆ ಕಟ್ಟುವುದಾಗಲಿ, ಮಾರ್ಗದ ಮೇಲೆ ಹಸಿ ದಂಟು–ತಂತಿಯನ್ನು ಎಸೆಯುವುದಾಗಲಿ, ಗೋಪುರದ ಮೇಲೆ ಹತ್ತುವುದಾಗಲಿ ಮಾಡಬಾರದು.

ಒಂದು ವೇಳೆ ಮೇಲಿನ ಕಾರಣಗಳಿಂದ ವಿದ್ಯುತ್ ಅಪಘಾತಕ್ಕೊಳಪಟ್ಟರೆ ಕವಿಪ್ರನಿ ನಿಯಮಿತವು ಜವಾಬ್ದಾರರಲ್ಲವೆಂದು ಬೃಹತ್ ಕಾಮಗಾರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಂಟಾಟ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ



**ಕಾಗವಾಡ :** ಸಮೀಪದ ಐನಾಪುರ ಗ್ರಾಮದ ಶ್ರೀಮತಿ ಗಿರಿಜಮ್ಮ ಶಿಕ್ಷಣ ಸಂಸ್ಥೆಯ ಸದ್ವಿದ್ಯಾ ನಿಕೇತನ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಾದ ಕುಮಾರ ಅರ್ಜುನ ಶಿವಾಜಿ ರಣಗಟ್ಟಿ, ಕುಮಾರ ಅಮಸಿದ್ದ ಮಲಕಾರಿ ಚಿಕ್ಕಲಕಿ ಇವರು ಮೇ 1 ರಿಂದ 3 ರ ವರೆಗೆ ರಾಜಸ್ಥಾನದ ಜೋಧಪುರದಲ್ಲಿ ನಡೆಯಲಿರುವ ಹನ್ನೆರಡನೆಯ ಜ್ಯೂನಿಯರ್ ರಾಷ್ಟ್ರಮಟ್ಟದ ಕುಂಟಾಟ ( ಲಂಗಡಿ) ಚಾಂಪಿಯನ್ ಶಿಪ್ ದಲ್ಲಿ ಕರ್ನಾಟಕ ರಾಜ್ಯದ ಬಾಲಕರ ತಂಡದಲ್ಲಿ ಆಯ್ಕೆಯಾಗಿದ್ದಾರೆ.

ಈ ಕ್ರೀಡಾ ಪ್ರತಿಭೆಗಳಿಗೆ ಶಾಲೆಯ ದೈಹಿಕ ಶಿಕ್ಷಕರಾದ ರಮೇಶ ಕೋಳಿಗುಡ್ಡೆ ಮಾರ್ಗದರ್ಶನ ನೀಡಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಚೇರಮನ್ನರಾದ ಶ್ರೀಪಾದ ಜೋಶಿ, ಮುಖ್ಯ ಗುರುಗಳಾದ ಡಾ. ಎಸ್. ಎಂ. ಜೋಶಿ, ಆಡಳಿತಾಧಿಕಾರಿ ಶ್ರೀಮತಿ ರತ್ನಾ ಜೋಶಿ, ಪಿ. ಆರ್. ಓ. ನಾಗೇಶ ತನ್ನಿ ಹಾಗೂ ಶಾಲೆಯ ಎಲ್ಲ ಶಿಕ್ಷಕ ಸಿಬ್ಬಂದಿ ಅಭಿನಂದಿಸಿದ್ದಾರೆ.

**ವರದಿ: ಡಾ ಜಯವೀರ ಎ.ಕೆ.**

# ಪ್ರಾಮಾಣಿಕ ಪ್ರಯತ್ನದಿಂದ ಯಶಸ್ಸು ಸಾಧ್ಯ: ಪ್ರಭು ಶ್ರೀ



**ಚಿಮ್ಮಡ :** ಇಂದಿನ ಆಧುನಿಕ ಯುಗದಲ್ಲಿ ಪ್ರಯತ್ನಶಿಲರಿಗೆ ಗೆಲುವು ಯಾವತ್ತಿಗೂ ಕಟ್ಟಿಟ್ಟ ಬುತ್ತಿ ಇದ್ದಂತೆ, ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಪ್ರತಿಹಂತದಲ್ಲು ಗೆಲುವು ಸಾಧ್ಯವೆಂದು ಸ್ಥಳಿಯ ವಿರಕ್ತಮಠದ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಪಿಪಿ ಮಾಳಿಗಡ್ಡಿ ಮಠದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ 'ಚಿನ್ನರ ಹೊನ್ನ ಕಿರಣೋತ್ಸವ' ಹಾಗೂ ಸನ್ಮಾನ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲಿ ಸಂಸ್ಕಾರ, ಪ್ರಾಮಾಣಿಕತೆ, ವಿನಯತೆ ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಕಲಿಸಿದ ಗುರುವ್ರಂದಕ್ಕೆ, ಹಾಗೂ ಶಾಲೆಗೆ ಕೀರ್ತಿ ತರಬೇಕು, ಈ ಶಾಲೆಯಲ್ಲಿ ವಿದ್ಯಾರ್ಜನೆ ಮಾಡಿದ ಹಲವಾರು ವಿದ್ಯಾರ್ಥಿಗಳು ಸರಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಿ ಶಾಲೆಗೆ ಮತ್ತು ಗ್ರಾಮಕ್ಕೆ ಕೀರ್ತಿ ತಂದಿದ್ದು ಶ್ಲಾಘನೀಯವೆಂದರು. ಶಾಲೆಯ ಮುಖ್ಯ ಗುರುಮಾತೆ ಎಸ್.ಡಿ. ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ರಾಮಣ್ಣ ಮುಗಳಖೋಡ, ಅಣ್ಣಪ್ಪಗೌಡ ಪಾಟೀಲ, ರಾಮಪ್ಪ ಬಗನಾಳ, ರಾಭಯ್ಯ ಮಠಪತಿ, ಉಮೇಶ ಪುಜಾರಿ, ಇಲಾಹಿ ಜಮಖಂಡಿ, ಮಹಾಲಿಂಗ ಬಳಗಾರ, ಬಾಳಪ್ಪ ಗಡೆಪ್ಪನವರ, ಪೀರಸಾಬ ನದಾಫ ವೇದಿಕೆಯಲ್ಲಿದ್ದರು,

ಇದೇ ಸಂಧರ್ಬದಲ್ಲಿ ಸಾಲೆಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪ್ರಮಾಣ ಪತ್ರ ಹಾಗೂ ಪಾರಿತೋಷಕ ನೀಡಿ ಗೌರವಿಸಲಾಯಿತು, ಹಾಗೂ ವಿದ್ಯಾರ್ಥಿಗಳಿಂದ ಮನರಂಜನಾ ಕಾರ್ಯಕ್ರಮಗನ್ನು ಹಮ್ಮಿಕೊಳ್ಳಲಾಗಿತ್ತು.

# ಸರ್ಕಾರಿ ಮುಸ್ಲಿಂ ವಸತಿ ಶಾಲೆ: 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ವಿಜಯಪುರ :** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ವಿಜಯಪುರದ ಅಫಜಲಪೂರ ಟಕ್ಕೆಯಲ್ಲಿರುವ ಸರ್ಕಾರಿ ಮುಸ್ಲಿಂ ವಸತಿ ಶಾಲೆಯಲ್ಲಿ 2024–25ನೇ ಸಾಲಿಗೆ 6ನೇ ತರಗತಿ ಆಂಗ್ಲ ಮಾಧ್ಯಮದ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಮುಸ್ಲಿಂ 2ಬಿ ಸಮುದಾಯದ ಅಲ್ಪಸಂಖ್ಯಾತ ಬಡ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು. ಆಸಕ್ತ ಅರ್ಹರು ಸೇವಾ ಸಿಂಧು https://sevasindhuservice.karnataka.gov.in ಪೋರ್ಟಲ್‌ನಲ್ಲಿ ನೇರವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ದಿನಾಂಕ : 15–03–2024 ಕೊನೆಯ ದಿನಾಂಕವಾಗಿದೆ.

ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದ ಮಾಹಿತಿ ಕೇಂದ್ರ ವಿಜಯಪುರ ಮೊ: 8123710766, ಇಂಡಿ ಮೊ: 9380293223, ಸಿಂದಗಿ ಮೊ: 8762320749, ಮುದ್ದೇಬಿಹಾಳ ಮೊ: 8722445552 ಹಾಗೂ ಬಸವನಬಾಗೇವಾಡಿ ಮೊ: 9972340721 ಹಾಗೂ ಶಾಲೆಯ ಪ್ರಾಂಶುಪಾಲರಾದ ಸಿದ್ಧರಾಮ ಎಂಟತ್ತ ಇವರಿಂದ ಮಾಹಿತಿ ಪಡೆದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಅರ್ಜಿಯ ಒಂದು ಪ್ರತಿಯನ್ನು ಶಾಲೆಗೆ ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೂಸುತ್ರವಾಗಿ ಪ್ರಾರಂಭಗೊಂಡ ದ್ವಿತೀಯ ಪಿಯುಸಿ ಪರಿಕ್ಷೆ

**ತಾಳಿಕೋಟೆ :** ಶಿಕ್ಷಣ ಇಲಾಖೆಯ ನಿಯಮಗಳನ್ನು ಅನುಸರಿಸುವದರೊಂದಿಗೆ ಪಟ್ಟಣದಲ್ಲಿ ಮಾರ್ಚ 1 ರಂದು ದ್ವಿತೀಯ ಪಿಯುಸಿ ಪರಿಕ್ಷೆ ಪ್ರಾರಂಭಗೊಂಡಿತ್ತಲ್ಲದೇ ಕೆಲಸ ಪರಿಕ್ಷಾ ಕೇಂದ್ರಗಳಿಗೆ ಬೆಟ್ಟಿ ನೀಡಿದ ಸ್ಥಳೀಯ ತಹಶಿಲ್ದಾರ ಶ್ರೀಮತಿ ಕೀರ್ತಿ ಚಾಲಕ ಅವರು ನಕಲು ಚಟುವಟಿಕೆ ನಡೆಯದಂತೆ ಏಚ್ಚರವಹಿಸಲು ಕೊಠಡಿ ಮೇಲ್ವಿಚಾರಿಕರಿಗೂ ಪರಿಕ್ಷಾ ಮೇಲ್ವಿಚಾರಕರಿಗೂ ಸೂಚಿಸಿದರು.

ಸ್ಥಳೀಯ ಎಸ್.ಕೆ.ಪ.ಪೂ. ಕಾಲೇಜ್ ಕೇಂದ್ರ ನಂ.><ಸಿ2307ರಲ್ಲಿ ನಡೆದ ಪರಿಕ್ಷೆಯಲ್ಲಿ ಒಟ್ಟು ಪರಿಕ್ಷೆಗೆ ಹಾಜರಾಗಬೇಕಿದ್ದ 597 ವಿಧ್ಯಾರ್ಥಿಗಳಲ್ಲಿ 485 ವಿಧ್ಯಾರ್ಥಿಗಳು ಇಂದು ಪ್ರಥಮ ಭಾಷೆ ಕನ್ನಡ ಪರಿಕ್ಷೆಗೆ ಹಾಜರಾಗಿ ಪರಿಕ್ಷೆ ಬರೆದಿದ್ದಾರೆಂದು ಮುಖ್ಯ ಅಧಿಕ್ಷಕರಾದ ಕಿಶೋರಕುಮಾರ ಕೆ, ಅವರು ತಿಳಿಸಿದ್ದಾರೆ. ಈ ಕೇಂದ್ರದಲ್ಲಿ ವೀ.ವಿ.ಎಸ್. ಮಹಿಳಾ ಪ.ಪೂ.ಕಾಲೇಜ್, ಎಚ್.ಎಸ್.ಪಾಟೀಲ ಪಿಯು ಕಾಲೇಜ್, ರಿಲಾಯಿನ್ಸ್ ಪ.ಪೂ.ಕಾಲೇಜ್, ಬಸವೇಶ್ವರ ಪ.ಪೂ. ಕಾಲೇಜ್, ಜೆಎಸ್‌ಜೆ ಪ.ಪೂ. ಕಾಲೇಜ್, ಒಳಗೊಂಡ ಕಾಲೇಜಿನ ವಿಧ್ಯಾರ್ಥಿಗಳು ಈ ಕೇಂದ್ರದಲ್ಲಿ ಪರಿಕ್ಷೆಯನ್ನು ಬರೆದಿದ್ದಾರೆಂದು ಮಾಹಿತಿ ನೀಡಿದರು.

ಈ ಕೇಂದ್ರದಲ್ಲಿ ಒಟ್ಟು 18 ಬ್ಲಾಕ್‌ಗಳನ್ನು ರಚಿಸಲಾಗಿದ್ದು ಸಹ ಅಧಿಕ್ಷಕರಾಗಿ ಪಿಸಿ ರಾಠೋಡ, ಹಾಗೂ ವಿಶೇಷ ಜಾಗೃತದಳದ ಸದಸ್ಯರಾಗಿ ನಾಗರಾಜ ಕೊಡೇಕಲ್ಲ ಅವರು ಕಾರ್ಯನಿರ್ವಹಿಸುತ್ತಾ ಸಾಗಿದ್ದಾರೆ.

ಎಚ್.ಎಸ್.ಪಾಟೀಲ ಪಿಯು ಕಾಲೇಜ್, ಕೇಂದ್ರ ನಂ. ><ಸಿ 2354 ಈ ಪರಿಕ್ಷಾ ಕೇಂದ್ರದಲ್ಲಿ ಪರಿ–ಕ್ಷೆಗೆ ಹಾಜರಾಗಬೇಕಿದ್ದ 504 ವಿಧ್ಯಾರ್ಥಿಗಳಲ್ಲಿ 485 ವಿಧ್ಯಾರ್ಥಿಗಳು ಹಾಜರಾಗಿ ಪರಿಕ್ಷೆ ಬರೆದಿದ್ದು 19 ವಿದ್ಯಾರ್ಥಿಗಳು ಗೈರು ಉಳಿದಿದ್ದಾರೆಂದು ಕೇಂದ್ರದ ಪರಿಕ್ಷಾ ಮುಖ್ಯ ಅಧಿಕ್ಷಕ ಎಸ್.ಎಸ್.ಗುಂಡಿ, ಅವರು ತಿಳಿಸಿದ್ದಾರೆ.

ಈ ಕೇಂದ್ರದಲ್ಲಿ ಎಸ್.ಕೆ.ಪ.ಪೂ. ಕಾಲೇಜ್, ಅಂಜುಮನ್ ಪ.ಪೂ. ಕಾಲೇಜ್, ಸರಕಾರಿ ಪ.ಪೂ. ಕಾಲೇಜ್, ಶ್ರೀ ಭಾಗ್ಯವಂತಿ ವಿಜ್ಞಾನ ಪ.ಪೂ. ಕಾಲೇಜ್, ವಿಧ್ಯಾರ್ಥಿಗಳು ಪರಿಕ್ಷೆಯನ್ನು ಬರೆದಿದ್ದಾರೆಂದು ಮಾಹಿತಿ ನೀಡಿದರು.

ಈ ಕೇಂದ್ರದಲ್ಲಿ ಸಹ ಮುಖ್ಯ ಅಧಿಕ್ಷಕರಾಗಿ ಎಂ.ಬಿ.ಹೂಗಾರ, ಹಾಗೂ ವಿಶೇಷ ಜಾಗೃತದಳದ ಸದಸ್ಯ ಬಿ.ಚಕ್ರಸಾಲಿ, ವೀರಣ್ಣ ಗಾಲಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

# ಗ್ರಾಮಗಳ ಸ್ವಚ್ಚತೆಗೆ ಸಿದ್ದರಾದ ಸ್ವಚ್ಚ ವಾಹಿನಿಯ ಮಹಿಳಾ ವಾಹನ ಚಾಲಕಿಯರ ಕುರಿತು ಪ್ರಶಂಸಿಸಿದ ಜಿ.ಪಂ ಸಿಇಓ



**ವಿಜಯಪುರ :** ಇಂದು ವಿಜಯಪುರದ ರುಡಸೆಟ್ ಸಂಸ್ಥೆಯಲ್ಲಿ ಆಯೋಜಿಸಲಾದ ಜಿಲ್ಲಾ ಪಂಚಾಯತಿಯ Day-NRLM- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಖಃಒ– ಸ್ವಚ್ಚ ಭಾರತ ಮಿಷನ್(ಗ್ರಾಮೀಣ) ಯೋಜನೆಗಳ ಸಹಯೋಗದೊಂದಿಗೆ ಆಯೋಜಿಸಲಾದ 6ನೇ ಬ್ಯಾಚನ "ಮಹಿಳಾ ವಾಹನ ಚಾಲಕಿಯರ" ತರಬೇತಿಯ ಸಮಾರೋಪ ಸಮಾರಂಭದಲ್ಲಿ ವಿಜಯಪುರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ ರವರು ಮಹಿಳಾ ವಾಹನ ಚಾಲಕಿಯರ ತರಬೇತಿಯ ಸಮಾರೋಪ ಸಂಮಾರಂಭ ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಆಗಮಿಸಿದರು.

ಜಿಲ್ಲಾಪಂಚಾಯತಿ,ವಿಜಯಪುರ ವತಿಯಿಂದ ಒಂದು ತಿಂಗಳ ಕಾಲ ಉಚಿತ, ಊಟ ವಸತಿಯೊಂದಿಗೆ ರುಡಸೆಟ್ ಸಂಸ್ಥೆಯಲ್ಲಿ ಆಯೋಜಿಸಲಾದ "ಲಘು ವಾಹನ ಚಾಲನಾ ತರಬೇತಿ"ಯಲ್ಲಿ ಭಾಗವಹಿಸಿದ ಜಿಲ್ಲೆಯ ಎಲ್ಲ 13 ತಾಲೂಕಿನ 25 ಗ್ರಾಮ ಪಂಚಾಯತಿ ಸ್ವ–ಸಹಾಯ ಸಂಘಗಳಿಂದ ಆಯ್ಕೆ ಮಾಡಲಾದ ಮಹಿಳಾ ವಾಹನ ಚಾಲಕಿಯರಿಗೆ ಉಚಿತ ತರಬೇತಿ ನೀಡಿ ಅವರ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಿ ಜಿ.ಪಂ ಸಿಇಓ ರವರು ಪ್ರಮಾಣ ಪತ್ರ ವಿತರಣೆ ಮಾಡಿ ತರಬೇತಿಯಲ್ಲಿ ಭಾಗವಹಿಸಿದ ಮಹಿಳಾ ವಾಹನ ಚಾಲಕಿಯರು ಸಿಇಓ ರವರೊಂದಿಗೆ ಒಂದು ತಿಂಗಳ ಕಾಲದ ವಾಹನ ಚಾಲನಾ ತರಬೇತಿಯ ಅನಿಸಿಕೆಗಳನ್ನು ಹಾಗೂ ಬ್ಯಾಂಕ್ ವ್ಯವಹಾರಗಳು ಇನ್ನಿತರ ಸರ್ಕಾರಿ ಯೋಜನೆಗಳ ಲಾಭ ಪಡೆಯುವ ಕುರಿತು ಜ್ಞಾನ ಡೆದಿರುವ ಬಗ್ಗೆ ಅನುಭವ ಹಂಚಿಕೊಂಡರು. ಸಿಇಓರವರು "ಸ್ವಚ್ಚ ವಾಹಿನಿ" ವಾಹನವನ್ನು ಚಾಲನೆ ನೀಡುವ ಮೂಲಕ ಮಹಿಳೆಯರಲ್ಲಿ ಆತ್ಮ ಸ್ಥೈರ್ಯ ತುಂಬಿದರು ಹಾಗೂ ಎಲ್ಲರಿಗೂ ಉತ್ತಮವಾಗಿ ಕೆಲಸ ನಿರ್ವಹಿಸುವಂತೆ ಮಾರ್ಗದರ್ಶನ ನೀಡಿದರು.

ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಈ ವರೆಗೆ 6 ತರಬೇತಿ ಬ್ಯಾಚಗಳಲ್ಲಿ 173 ಗ್ರಾಮ ಪಂಚಾಯತಿಗಳ 173 ಜನ ಮಹಿಳೆಯರಿಗೆ ತರಬೇತಿ ನೀಡಿ 143 ಗ್ರಾಮ ಪಂಚಾಯತಿ ವ್ಯಾಪ್ತಿಯ ಮಹಿಳೆಯರಿಗೆ ವಾಹನ ಚಾಲನಾ ಪರವಾನಿಗೆ ಹಸ್ತಾಂತರಿಸಲಾಗಿದೆ. ಸುಮಾರು 46 ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ನಿತ್ಯ ಮಹಿಳಾ ಚಾಲಕರು ಮತ್ತು 3 ಜನ ಸ್ವಚ್ಚತಾಗಾರ ಮಹಿಳೆಯರು ಘನ ತ್ಯಾಜ್ಯ ನಿರ್ವಹಣೆಯ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರಾದ ಸಿ. ಆರ್. ಮುಂಡರಗಿ, ಜಿ.ಪಂ.ನ ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿಗಳಾದ ಎ. ಬಿ. ಅಲ್ಲಾಪೂರ ಅವರು ಭಾಗವಹಿಸಿ ಎಲ್ಲಾ ಮಹಿಳಾ ಡ್ರೈವರ್ ಅವರಿಗೆ ಜಿಲ್ಲಾ ಪಂಚಾಯತ ಸ್ವೀಪ್ ಸಮಿತಿಯ ವತಿಯಿಂದ ಮತದಾನ ಜಾಗೃತಿ ಮತ್ತು ಮತದಾನ ಪ್ರತಿಜ್ಞಾ ವಿಧಿ ಬೋದಿಸುವ ಮೂಲಕ ಮತದಾನದ ಮಹತ್ವ ತಿಳಿಸಿದರು. ಈ ಸಂದರ್ಭದಲ್ಲಿ ರುಡಸೆಟ್ ಸಂಸ್ಥೆಯ ನಿರ್ದೇಶಕರು, ಹಿರಿಯ ಉಪನ್ಯಾಸಕರುಗಳು, ಎನ್.ಆರ್. ಎಲ್.ಎಮ್ ಯೋಜನೆಯ ಕಾರ್ಯಕ್ರಮ ಸಂಯೋಜಕರಾದ ವಿಶ್ವನಾಥ ಶಹಾಪುರ, ಜಿಲ್ಲಾ ಕಾರ್ಯಕ್ರಮ ಪ್ರಬಂಧಕರಾದ ಅಮೋಘಸಿದ್ಧ ಗೌಳಿ, ಸ್ವಚ್ಚ ಭಾರತ ಮಿಷನ್ (ಗ್ರಾ) ಸಿಬ್ಬಂದಿಗಳಾದ ಕಿರಣ ಅಂಕದ, ಶ್ರೀಧರ ಹೊಸ್ಮನಿ, ಪುನೀತ್ ಕೆಲೂರ ಹಾಗೂ ಇತರರು ಉಪಸ್ಥಿತರಿದ್ದರು.

# ಜಲಕೃಷಿಯಲ್ಲಿ ಮುಂದುವರೆದ ತಂತ್ರಜ್ಞಾನ: ತರಬೇತಿ ಕಾರ್ಯಕ್ರಮ



**ವಿಜಯಪುರ :** ಆರೋಗ್ಯ ದೃಷ್ಠಿಯಿಂದ ಮೀನು ಅಧಿಕ ಜನಪ್ರೀಯಗೊಳ್ಳುತ್ತಿರುವ ಆಹಾರ ದೇಶದ ಹೆಚ್ಚುತ್ತಿರುವ ಜನಸಂಖ್ಯೆಗೆ ಪೌಷ್ಠಿಕಾಂಶಭರಿತ ಹಾಗೂ ಕಡಿಮೆ ವೆಚ್ಚದ ಸಮತೋಲ ಆಹಾರವನ್ನು ದೊರೆಯುವಂತೆ ಮಾಡುವುದು ಸದ್ಯದ ಪರಿಸ್ಥಿತಿಯಲ್ಲಿ ದೊಡ್ಡ ಸವಾಲಾಗಿದೆ ಎಂದು ಬೀದರನ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರ ಡಾ.ಎನ್.ಎ.ಪಾಟೀಲ್ ಹೇಳಿದರು.

ನಗರದ ಹೊರ ವಲಯದಲ್ಲಿರುವ ಮೀನುಗಾರಿಕೆ ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಭೂತನಾಳದಲ್ಲಿ ಜರುಗಿದ "ಜಲಕೃಷಿಯಲ್ಲಿ ಮುಂದುವರೆದ ತಂತ್ರಜ್ಞಾನ"ಎಂಬ ವಿಷಯದ ಮೇಲೆ ಎರಡು ದಿನದ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಭೂತನಾಳ ಮೀನುಗಾರಿಕೆ ಸಂಶೋಧನಾ ಕೇಂದ್ರದ ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ವಿಜಯಕುಮಾರ ಎಸ್. ಅವರು ಮಾತನಾಡಿ, ಪ್ರಸ್ತುತ ಮೀನುಗಾರಿಕೆಯಲ್ಲಿ ಸುಧಾರಿತ ತಂತ್ರಜ್ಞಾನಗಳು ಲಭ್ಯವಿದ್ದು ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಲಾಭವನ್ನು ಗಳಿಸಬಹುದು ಇದಕ್ಕಾಗಿ ಕೇಂದ್ರ ಮತ್ತು ಸರ್ಕಾರದ ಯೋಜನೆಗಳಾದ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ, ಮುದ್ರಾ ಯೋಜನೆ, ಪ್ರಧಾನಮಂತ್ರಿ ಮತ್ಸ್ಯ ಕಿಸಾನ– ಸಹ ಯೋಜನೆ, ಜಿಲ್ಲಾ ಪಂಚಾಯತ ಯೋಜನೆಗಳು ಹಾಗೂ ಇನ್ನಿತರೆ ಯೋಜನೆಗಳು ಮೀನುಗಾರಿಕೆಯನ್ನು ಉತ್ತೇಜಿಸಲು ಸಹಕಾರಿಯಾಗುತ್ತಿದ್ದು, ರೈತರು ಮತ್ತು ಉದ್ಯೋಮಿದಾರರು ಇದರ ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕೆಂದು ಕರೆ ನೀಡಿದರು.

ಭೂತನಾಳ ಮೀನುಗಾರಿಕೆ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ವಿಜಯ.ಎಸ್. ಅತನೂರ, ಅವರು ಮಾತನಾಡಿ, ಜಿಲ್ಲೆಯು ಅಪಾರ ಪ್ರಮಾಣದ ಜಲಸಂಪನ್ಮೂಲಗಳನ್ನು ಹೊಂದಿದ್ದು ಮೀನುಗಾರಿಕೆಗೆ ವಿಪುಲ ಅವಕಾಶಗಳಿವೆ. ಜೊತೆಗೆ ಕೆರೆ ತುಂಬುವ ಯೋಜನೆಯಿಂದ ಅಂತರ್ಜಲ ಮರುಪೂರಣ ಹೊಂದುತ್ತಿದ್ದು ತೆರೆದ ಬಾವಿ ಮತ್ತು ಕೊಳವೆ ಬಾವಿಗಳಿಂದ ನೀರನ್ನು ಸಂಗ್ರಹಿಸಿ ಮೀನುಗಾರಿಕೆಯನ್ನು ಆಧುನಿಕ ತಂತ್ರಜ್ಞಾನದ ಮೂಲಕ ಕೈಗೊಳ್ಳಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರವಿಕುಮಾರ ಮೋದಿ, ನರಸು, ಸುರೇಶ, ರಾಜೇಶ್ವರಿ ಉಪಸ್ಥಿತರಿದ್ದು. ಸುಮಾರು 50ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

# ಕೆ.ಶಿವರಾಮ ವಿಧಿವಶ: ಶ್ರದ್ಧಾಂಜಲಿ ಸಭೆ



**ವಿಜಯಪುರ :** ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಅಧ್ಯಕ್ಷರು ಚಲನಚಿತ್ರ ನಟರು, ನಿವೃತ್ ಆಯ್.ಎ.ಎಸ್. ಅಧಿಕಾರಿಗಳಾದದಿ. ಕೆ.ಶಿವರಾಮರವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಜಿಲ್ಲಾ ಛಲವಾದಿ ಮಹಾಸಭಾ, ಬುದ್ಧವಿಹಾರ ನಿರ್ಮಾಣ ಸಮಿತಿ, ಹಾಗೂ ಛಲವಾದಿ ನಿವೃತ್ತ ನೌಕರರ ಸಂಘದ ವತಿಯಿಂದ ನಗರದ ಭೌದ್ಧವಿಹಾರದ ಸಭಾಂಗಣದಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮೊಂಬತ್ತಿ ಹಚ್ಚಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಛಲವಾದಿ ಸಮುದಾಯದ ಮುಖ್ಯಸ್ಥರಾದ ಚಂದ್ರಶೇಖರ ಕೊಡಬಾಗಿ, ಸುನೀಲ ಉಕ್ಕಲಿ, ರಾಜಶೇಖರ ಯಡಹಳ್ಳಿ, ಸುಭಾಸ ಗುಡಿಮನಿ, ಶಶಿಕಾಂತ ಹೊನವಾಡಕರ, ರಾಹುಲ್ ಕುಬಕಡ್ಡಿ, ನಿಂಬಾಳಕರ, ಬಾಬಾಸಾಹೇಬ ವಿಜಯದಾರ, ಜಕ್ಕಪ್ಪ ಅಡವೆ, ಅಡಿವೆಪ್ಪ ಸಲಗಲ, ಅಭಿಷೇಕ ಚಕ್ರವರ್ತಿ, ಬಸು ತಳವಾರ, ದಶರಥ ಶಿಂಗೆ, ಭೀಮರಾವ ತಳಕೇರಿ, ಬ್ಯಾಳಿ, ಹಳ್ಳದಮನಿ, ಬಸವರಾಜ ತಳವಾರ, ನಾಗರಾಜ ಲಂಬು, ಸತೀಶ ದೊಡಮನಿ ಸೇರಿದಂತೆ ಅನೇಕರು ಇದ್ದರು.

# ಜಿಲ್ಲೆಯ ಮಕ್ಕಳ ಪಾಲನಾ ಸಂಸ್ಥೆಗಳು ನೊಂದಾಯಿಸಿಕೊಳ್ಳಲು ಸೂಚನೆ

**ವಿಜಯಪುರ :** ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ನೊಂದಣಿಯಾಗದೇ ಇರುವ ಮಕ್ಕಳ ಪಾಲನಾ ಸಂಸ್ಥೆಗಳು ಬಾಲನ್ಯಾಯ ಕಾಯ್ದೆಯನ್ವಯ ಮಾರ್ಚ್ ಅಂತ್ಯದೊಳಗಾಗಿ ನೋಂದಾಯಿಸಿಕೊಳ್ಳುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ. ಬಾಲನ್ಯಾಯ ಕಾಯ್ದೆಯನ್ವಯ ಅರೆಕಾಲಿಕ ಅಥವಾ ಪೂರ್ಣವಾಗಿ ಪೋಷಣೆ ಮತ್ತು ರಕ್ಷಣೆ ಅವಶ್ಯಕತೆಯಿರುಜವ ಮಕ್ಕಳನ್ನು ನೋಡಿಕೊಳ್ಳಲು ಅಥವಾ ಕಾನೂನಿನ ಸಂಘರ್ಷದಲ್ಲಿರುವ ಮಕ್ಕಳ ಆರೈಕೆಗೆಂದು ರಾಜ್ಯ ಸರ್ಕಾರದಿಂದ ನಡೆಸಲ್ಪಡುವ ಅಥವಾ ಸ್ವ–ಯಂ ಸೇವಾ ಸಂಘಟನೆಗಳಿಂದ ನಡೆಸುವ, ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಧನ ಸಹಾಯ ಪಡೆಯುವ ಹಾಗೂ ಪಡೆಯದಿರುವ ಎಲ್ಲ ಸಂಸ್ಥೆಗಳು ಆರು ತಿಂಗಳೊಳಗಾಗಿ ನೊಂದಾಯಿತವಾಗಬೇಕು. ನೊಂದಾಯಿಸಿಕೊಳ್ಳದ ಸಂಸ್ಥೆಗಳ ವಿರುದ್ಧ ಒಂದು ವರ್ಷದವರೆಗೆ ವಿಧಿಸಬಹುದಾದ ಕಾರಾಗೃಹವಾಸ ಅಥವಾ ಒಂದು ಲಕ್ಷಕ್ಕೆ ಕಡಿಮೆಯಿಲ್ಲದಂತೆ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದ್ದು, ಜೊತೆಗೆ ಅರ್ಜಿ ಸಲ್ಲಿಸಲು ಪ್ರತಿ 30 ದಿನಗಳ ಕಾಲದ ವಿಳಂಬವನ್ನು ಬೇರೆ ಅಪರಾಧ ಎಂದು ಪರಿಗಣಿಸಲಾಗುವುದರಿಂದ ಜಿಲ್ಲೆಯ ಮಕ್ಕಳ ಪಾಲನಾ ಸಂಸ್ಥೆಗಳು ಮಾರ್ಚ್–2024ಅಂತ್ಯದೊಳಗೆ ನೊಂದಾಯಿಸಿಕೊಳ್ಳಬೇಕು. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬಿ4/3 ವಿವೇಕ ನಗರ ಪಶ್ಚಿಮ, ವಿಜಯಪುರ ದೂ: 08352–295261 ಸಂಖ್ಯೆಗೆ ಸಂಪರ್ಕಿಸುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೈಟೆಕ್ ಹಾರ್ವೆಸ್ಟರ ಹಬ್‌ಗೆ ಅರ್ಜಿ

**ಬಾಗಲಕೋಟೆ :** ಪ್ರಸಕ್ತ ಸಾಲಿನಲ್ಲಿ ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ ಯೋಜನೆಯಡಿ ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಬೆಳೆಯ ವಿಧ ಮತ್ತು ಕಟಾವು ಅವಧಿಯ ಆಧಾರದ ಮೇಲೆ ಕಾರಿಡಾರ್ ಮಾದರಿಯಲ್ಲಿ ಸ್ಥಾಪಿಸಲು ರಾಜ್ಯ ಸರ್ಕಾರ ಆಯವ್ಯಯದಲ್ಲಿ ಘೋಷಿಸಿದ್ದು, ಕಾರಿಡಾರ್‌ನಲ್ಲಿ ಯಂತ್ರೋಪಕರಣಗಳು ಸಂಚರಿಸಿ ಕಾರ್ಯನಿರ್ವಹಿಸಬಹುದಾಗಿದೆ.

ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಅನುಷ್ಠಾನ ಮಾಡಲು ಸೇವಾಧಾರ ಫಲಾನುಭವಿಗಳು ಭಾಗವಹಿಸಬಹುದಾಗಿದೆ. ಪರಿಶಿಷ್ಟ ಜಾತಿ ವರ್ಗದ ರೈತರಿಗೆ ಗರಿಷ್ಠ ಶೇ.70 ಸಹಾಯಧನವನ್ನು ನೀಡಲಾಗುತ್ತದೆ. ಶುಗರ್‌ಕೇನ್ ಹಾರ್ವೆಸ್ಟರ್ ಹಬ್‌ನಲ್ಲಿ ಶುಗರ್‌ಕೇನ್ ಹಾರ್ವೆಸ್ಟರ್‌ದೊಂದಿಗೆ ಖಟಣಜಡಿ ಖಠತಿ ಖಠಣಚಿತಚಿಣಠಡಿ ದಾಸ್ತಾನೀಕರಿಸುವುದು ಕಡ್ಡಾಯವಾಗಿರುತ್ತದೆ. ಹೈಟೆಕ್ ಹಾರ್ವೆಸ್ಟರ್ ಹಬ್ ಘಟಕಗಳಲ್ಲಿ ಈ ಮೇಲಿನ ಹೈಟೆಕ್ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಿ ರೈತರಿಗೆ ಬಾಡಿಗೆ ಆಧಾರದಲ್ಲಿ ಒದಗಿಸಲು ಅವಕಾಶವಿರುತ್ತದೆ.

ಹೈಟೆಕ್ ಹಾರ್ವೆಸ್ಟರ್ ಹಬ್‌ಗಳಲ್ಲಿ ದಾಸ್ತಾನೀಕರಿಸುವ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಕಾರಿಡಾರ್‌ನಲ್ಲಿ ಬರುವ ರೈತರಿಗೆ ಒದಗಿಸುವುದು. ಕಾರ್ಯಾದೇಶ ನೀಡಿದ ನಂತರ ಖರೀದಿಸಿದ ಯಂತ್ರೋಪಕರಣಗಳಿಗೆ ಮಾತ್ರ ಸಹಾಯಧನವನ್ನು ನೀಡಲಾಗುವುದು. ಜಿಲ್ಲೆಗೆ ಒಂದು ಶುಗರ್‌ಕೇನ್ ಹಾರ್ವೆಸ್ಟರ್ ಹಬ್ (1 ಪ.ಜಾ ವೈಯಕ್ತಿಕ ಫಲಾನುಭವಿ) ಕೇಂದ್ರ ಕಛೇರಿಯಿಂದ ಕಾರ್ಯಕ್ರಮವಿದ್ದು, ಜಿಲ್ಲಾ ಮಟ್ಟದ ಉಪಕರಣ ಸಮಿತಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿ ನಿಯಮಾನುಸಾರ ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ನಿರ್ವಹಿಸಲು ಸೇವಾದಾರ ಸಂಸ್ಥೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

ಅರ್ಜಿದಾರರು ಇಚ್ಛಿಸುವ ಹಬ್‌ಗೆ ಅರ್ಜಿ ನಮೂನೆಯಲ್ಲಿ, ನೋಂದಾಯಿಸಿದ ಸಂಸ್ಥೆ ಪ್ರಮಾಣ ಪತ್ರ, ಪಹಣಿ, ಜಾತಿ ಪ್ರಮಾಣ ಪತ್ರ, ಗುರುತಿನ ಪತ್ರ, ಬ್ಯಾಂಕ್ ಖಾತೆ ಸಂಖ್ಯೆ, 20 ರಊ.ಗಳ ಛಾಪಾ ಕಾಗದದ ಮೇಲೆ ಹಬ್‌ಅನ್ನು ಪರಭಾರೆ ಮಾಡುವುದಿಲ್ಲವೆಂದು ಮುಚ್ಚಳಿಕೆ ಪತ್ರ, ಸಕ್ಕರೆ ಕಾರ್ಖಾನೆಯಿಂದ ಕಬ್ಬು ಕಟಾವಿಗೆ ಮಾಡಿಕೊಂಡ ಲಿಖಿತ ಒಪ್ಪಂದ ಪ್ರಮಾಣ ಪತ್ರ ಹಾಗೂ ಸಹಾಯಧನವು ಆಗಿರುವುದರಿಂದ ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ತಾತ್ವಿಕ ಸಾಲ ಮಂಜೂರಾತಿ ಪತ್ರವನ್ನು ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಮಾರ್ಚ 4 ಕೊನೆಯ ದಿನವಾಗಿರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಿಯು ಪರೀಕ್ಷೆ
## ಮೊದಲ ಪರೀಕ್ಷೆಗೆ 5 ವಿದ್ಯಾರ್ಥಿಗಳು ಗೈರು



**ತೇರದಾಳ :** ಮಾ. 1ರಿಂದ ಪ್ರಾರಂಭಗೊಂಡ ದ್ವಿತೀಯ ಪಿಯು ಪರೀಕ್ಷೆಗೆ ಮೊದಲ ದಿನವೇ ತೇರದಾಳ ಪರೀಕ್ಷಾ ಕೇಂದ್ರದಲ್ಲಿ 5 ವಿದ್ಯಾರ್ಥಿಗಳು ಗೈರಾಗಿದ್ದಾರೆ.

446 ವಿದ್ಯಾರ್ಥಿಗಳ ಪೈಕಿ 441 ವಿದ್ಯಾರ್ಥಿಗಳು ಪ್ರಥಮ ಭಾಷೆ ಪರೀಕ್ಷೆ ಎದುರಿಸಿದರು. ತೇರದಾಳ ಪರೀಕ್ಷಾ ಕೇಂದ್ರದಲ್ಲಿ ಆರು ಕಾಲೇಜುಗಳನ್ನು ಸೇರಿಸಲಾಗಿದೆ. 17 ಬ್ಲಾಕ್‌ಗಳನ್ನು ಮಾಡಲಾಗಿದ್ದು, ಮಹಾಲಿಂಗಪುರದ ಎಸ್. ಆರ್. ನಾಯಕವಾಡಿ ಪರೀಕ್ಷೆ ಅಧೀಕ್ಷಕರಾಗಿ ನೇಮಕಗೊಂಡಿದ್ದಾರೆ. ಪರೀಕ್ಷೆ ಕೇಂದ್ರದ ಸುತ್ತಮುತ್ತ ಪೋಲೀಸ್ ಬಂದೋಬಸ್ತ್ ಒದಗಿಸಿದ್ದು, ಪಿಎಸ್‌ಐ ಅಪ್ಪು ಐಗಳಿ ಕೇಂದ್ರಕ್ಕೆ ಬೇಟಿ ನೀಡಿ ಪರಿಶೀಲಿಸಿದರು.

# ಹಿಪ್ಪರಗಿ ಸರಕಾರಿ ಶಾಲೆಗೆ ಭೂಸ್ವಾಧೀನಾಧಿಕಾರಿ ಮುಲ್ಲಾ ಭೇಟಿ





**ಜಮಖಂಡಿ :** ಸಮೀಪದ ಹಿಪ್ಪರಗಿ ಗ್ರಾಮದ ನಮ್ಮೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೃಷ್ಣಾ ಮೇಲ್ದಂಡೆ ಯೋಜನೆ ವಿಶೇಷ ಭೂ ಸ್ವಾಧಿನಾಧಿಕಾರಿ ಸಾಜೀದಅಹ್ಮದ ಮುಲ್ಲಾ ಭೇಟಿ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಓದುವಾಗ ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆಯಿತ್ತು. ಶಾಲಾಮಕ್ಕಳಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಗ್ರಂಥಾಲಯ, ಕಂಪ್ಯೂಟರ್ ವ್ಯವಸ್ಥೆ ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು. ಆಧುನಿಕ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ವಿದ್ಯಾರ್ಥಿಗಳು ಸರಿಯಾದ ದಿಕ್ಕಿನಲ್ಲಿ ಅಧ್ಯಯನ ಮಾಡಿ ಜೀವನದಲ್ಲಿ ದೊಡ್ಡ ಸಾಧನೆ ಮಾಡಬೇಕೆಂದರು. ಶಾಲೆಯಲ್ಲಿ ವಿಶೇಷವಾಗಿ ಉಚಿತವಾಗಿ ಎಲ್.ಕೆ.ಜಿ ಮತ್ತು ಯು.ಕೆ.ಜಿ. ಪ್ರಾರಂಭಗೊಂಡಿರುವದಕ್ಕೆ ಗ್ರಾಮಸ್ಥರನ್ನು ಮತ್ತು ಗ್ರಾಮ ಪಂಚಾಯತ ಸದಸ್ಯರಿಗೆ ಕೃತಘ್ನತೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ವಿಶೇಷ ಭೂ ಸ್ವಾಧಿನಾಧಿಕಾರಿ ಸಾಜೀದಅಹ್ಮದ ಮುಲ್ಲಾ ಅವರನ್ನು ಸನ್ಮಾನಿಸಲಾಯಿತು.

ಶಾಲೆಪ್ರಭಾರಿ ಮುಖ್ಯಶಿಕ್ಷಕ ಎಸ್.ಬಿ.ಕುಂಬಾರ ಗ್ರಾ.ಪಂ.ಸದಸ್ಯರಾದ ಮಾದೇವ ಮಂಟೂರ, ಅಣ್ಣಪ್ಪ ಪಾಟೀಲ, ಮಹಾದೇವ ಕಾಂಬಳೆ, ಪಿ.ಡಿ.ಓ. ಬಸಲಿಂಗ ವಾಲಿ, ಕಂದಾಯ ನಿರೀಕ್ಷಕ ಪಿ.ಆರ್.ಮಠಪತಿ, ಗ್ರಾಮ ಆಡಳಿತಾಧಿಕಾರಿ ಎ.ಎಸ್.ಬಿರಾದಾರ, ಗ್ರಾಮದ ಹಿರಿಯರು, ಎಸ್.ಡಿ.ಎಂ.ಸಿ. ಅಧ್ಯಕ್ಷರು ಮತ್ತು ಸದಸ್ಯರು ಸಹಿತ ಹಲವರು ಇದ್ದರು.

# ಜಿಲ್ಲಾ ಸಮ್ಮೇಳನಾಧ್ಯಕ್ಷರಾಗಿ ಡಾ.ತಾತಾಸಾಹೇಬ ಬಾಂಗಿ ಆಯ್ಕೆ



**ಬಾಗಲಕೋಟೆ:** ಬಾಗಲಕೋಟೆಯಲ್ಲಿ ಮಾರ್ಚ 2ನೇ ವಾರದಲ್ಲಿ ಜರುಗಲಿರುವ ಬಾಗಲಕೋಟೆ ಜಿಲ್ಲಾ ಹನ್ನೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿಗಳು, ಕವಿಗಳು, ಸಂಶೋಧಕರು ಹಾಗೂ ಸಂಘಟಕರಾದ ಜಮಖಂಡಿಯ ಡಾ.ತಾತಾಸಾಹೇಬ ಪಿ. ಬಾಂಗಿ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ತಿಳಿಸಿದ್ದಾರೆ.

ಕಸಾಪ ಜಿಲ್ಲಾ ಭವನದಲ್ಲಿ ನಡೆದ ಜಿಲ್ಲಾ ಕಾರ್ಯಕಾರಣಿ ಸಭೆಯಲ್ಲಿ ಈ ಕುರಿತು ಚರ್ಚಿಸಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. 83 ವಯೋಮಾನದವರಾದ ಡಾ.ತಾತಾಸಾಹೇಬ ಬಾಂಗಿ ಅವರು ಸಾಹಿತ್ಯಿಕ ಸೇವೆ ಹಾಗೂ ಸಮಾಜಮುಖಿ ಸಂಘಟನೆಯ ಸೇವೆಯನ್ನು ಗುರುತಿಸಿ ಈ ಆಯ್ಕೆ ಮಾಡಲಾಗಿದೆ.

'ಪರಿಷತ್ತಿನ ನಡೆ-ಜನಸಾಮಾನ್ಯರ ಕಡೆ' ಎಂದು ಕಸಾಪ ರಾಜ್ಯಾಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರ ಆಶಯದಂತೆ ಎಲೆಮರೆಯ ಕಾಯಿಯಂತಿರುವ ಹಾಗೂ ಸಾಮಾಜಿಕ ಸಂಘಟನೆಯಲ್ಲಿ ಅಪಾರ ಅನುಭವ ಹೊಂದಿರುವ ಡಾ.ತಾತಾಸಾಬೇಹ ಬಾಂಗಿ ಅವರನ್ನು ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಶಿವಾನಂದ ಶೆಲ್ಲಿಕೇರಿ ತಿಳಿಸಿದ್ದಾರೆ.

ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ನೀ.ಸಿದ್ಧರಾಮ ಶಿರೋಳ, ಡಾ.ಚಂದ್ರಶೇಖರ ಕಾಳನ್ನವರ, ಗೌರವ ಕೋಶಾಧ್ಯಕ್ಷ ಡಾ. ಸಿ.ಎಂ. ಜೋಶಿ, ತಾಲೂಕಾ ಘಟಕಗಳ ಅಧ್ಯಕ್ಷರಾದ ಪಾಂಡುರಂಗ ಸಣ್ಣಪ್ಪನವರ, ಡಾ.ಎಚ್.ಎಸ್. ಘಂಟಿ, ಗುರುರಾಜ ಲೂತಿ, ಬಿ.ಎಫ್. ಹೊರಕೇರಿ, ಆನಂದ ಪೂಜಾರಿ, ಮಲ್ಲಿಕಾರ್ಜುನ ಸಜ್ಜನ, ಮಹಾದೇವ ಕಂಬಾಗಿ, ಮ.ಕೃ. ಮೇಗಾಡೆ, ಸಂತೋಷ ತಳಕೇರಿ, ಕಾರ್ಯಕಾರಣಿ ಸದಸ್ಯರಾದ ಯೋಗೀಶ ಲಮಾಣಿ, ವಿಜಯಶ್ರೀ ಮುರನಾಳ, ಶ್ರೀನಿವಾಸ ಅಪರಂಜಿ, ಮಾಧ್ಯಮ ಕಾರ್ಯದರ್ಶಿ ಪ್ರಕಾಶ ಗುಳೇದಗುಡ್ಡ ಸೇರಿದಂತೆ ಇತರರು ಸಭೆಯಲ್ಲಿ ಇದ್ದರು.

# ಸೋಲಾರ ಸ್ಥಾವರಗಳ ಸ್ಥಾಪನೆಗೆ ನಿರ್ಣಯ ಮತ್ತು ರೈತರ ರಸಗೊಬ್ಬರಕ್ಕೆ ಸಬ್ಸಿಡಿ ನೀಡಿದ ಕೇಂದ್ರದ ಕ್ರಮ ಸ್ವಾಗತಾರ್ಹ: ಸಂಸದ ಈರಣ್ಣ ಕಡಾಡಿ



**ಮೂಡಲಗಿ :** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಏಪ್ರಿಲ್ 01 ರಿಂದ ಸೆಪ್ಟೆಂಬರ್ 30 ರವರೆಗಿನ ಖಾರಿಫ್ ಹಂಗಾಮಿಗೆ ಅನ್ವಯವಾಗುವಂತೆ ಫಾಸ್ಪೇಟಿಕ ಮತ್ತು ಪೋಟ್ಯಾಷ್‌ಯುಕ್ತ ರಸಗೊಬ್ಬರಗಳ ಮೇಲೆ 24,420 ಕೋಟಿ ರೂ.ಗಳನ್ನು ಸಬ್ಸಿಡಿ ನೀಡಲು ತೀರ್ಮಾನಿಸಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಕೇಂದ್ರ ಸರ್ಕಾರದ ಕ್ರಮವನ್ನು ಶ್ಲಾಘೀಸಿದ್ದಾರೆ.

ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿದ ಸಂಸದ ಈರಣ್ಣ ಕಡಾಡಿ ಅವರು ಕೇಂದ್ರ ಸರ್ಕಾರ ಖಾರಿಫ್ ಹಂಗಾಮಿನ ಬೆಳೆಗಳಿಗೆ ಸಾರಜನಕ, ರಂಜಕ, ಪೊಟ್ಯಾಶ್ ಮತ್ತು ಗಂಧಕದಂತಹ ವಿವಿಧ ಪೋಷಕಾಂಶಗಳಿಗೆ ಸಬ್ಸಿಡಿ ದರ ಒದಗಿಸಲು ಸರ್ಕಾರ ನಿರ್ಧರಿಸಿದೆ. ರೈತರಿಗೆ ಪ್ರತಿ ಕ್ವಿಂಟಾಲ್‌ಗೆ 1350 ರೂ. ದರದಲ್ಲಿ ಮಣ್ಣಿನ ಪೋಷಕಾಂಶವಾದ ಡಿಎಪಿಯನ್ನು ಪಡೆಯಬಹುದು. ಸಾರಜನಕ (ಎನ್) ಪ್ರತಿ ಕೆ.ಜಿಗೆ ರೂ.47.02, ಫಾಸ್ಪೇಟಿಕ (ಪಿ) ಪ್ರತಿ ಗ್ರಾಂ.ಗೆ 28.72 ರೂ ಪೊಟ್ಯಾಸಿಕ್ ಕೆ.ಜಿಗೆ ರೂ. 2.38 ಮತ್ತು ಸಲ್ಫರ್‌ಗೆ ರೂ 1,89 ರೂ.ಗೆ ನಿಗದಿಪಡಿಸಲಾಗಿದೆ.

ಇದು ಅನ್ನದಾತರ ಬಾಳಿನಲ್ಲಿ ಸಮಗ್ರ ಬದಲಾವಣೆ ತರುವ ದೃಢ ಹೆಜ್ಜೆಯಾಗಿದೆ ಎಂದರು. 75021 ಕೋಟಿ ರೂ. ವೆಚ್ಚದಲ್ಲಿ ಪಿ.ಎಂ ಸೂರ್ಯ ಘರ್ ಯೋಜನೆಯಡಿ ಸೋಲಾರ್ ಸ್ಥಾವರಗಳ ಸ್ಥಾಪನೆಗೆ 78000 ವರೆಗೆ ಸಬ್ಸಿಡಿ ಮತ್ತು ಒಂದು ಕೋಟಿ ಮನೆಗಳಿಗೆ 300 ಯುನಿಟ್ ಉಚಿತ ವಿದ್ಯುತ್ ನೀಡಲು ಉದ್ದೇಶಿಸಲಾಗಿದೆ. ಈ ಯೋಜನೆಯ ಮೂಲಕ ಕುಟುಂಬಗಳು ವಿದ್ಯುತ್ ಬಿಲ್ ಉಳಿಸುವ ಜೊತೆಗೆ ಹೆಚ್ಚುವರಿ ವಿದ್ಯುತ್ ಅನ್ನು ರಿಯಾಯತಿ ದರದಲ್ಲಿ ಮಾರಾಟ ಮಾಡುವ ಮೂಲಕ ಆದಾಯಗಳಿಸಲು ಸಾಧ್ಯವಾಗುತ್ತದೆ ಸೋಲಾರ ಸ್ಥಾವರಗಳ ಸ್ಥಾಪನೆಗೆ ಮತ್ತು ರೈತರ ರಸಗೊಬ್ಬರಕ್ಕೆ ಸಬ್ಸಿಡಿ ನಿರ್ಣಯ ಕೈಗೊಂಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಸಂಸದ ಈರಣ್ಣ ಕಡಾಡಿ ಸ್ವಾಗತಿಸಿದ್ದಾರೆ.

# ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ನಿಷೇಧ

**ಬಾಗಲಕೋಟೆ :** ಸರಕಾರದ ಆದೇಶದನ್ವಯ ನಗರಸಭೆ ವ್ಯಾಪ್ತಿಯಲ್ಲಿ ಅಧಿಕೃತ ಕಿರಾಣಿ ಸ್ಟೋರ್ಸ್, ಹೋಟೆಲ್ ಮತ್ತು ತರಕಾರಿ ಮಾರಾಟಗಾರರು ಹಾಗೂ ಸಾರ್ವಜನಿಕರು ಏಕ ಬಳಕೆಯ ಪ್ಲಾಸ್ಟಿಕ್ ಕ್ಯಾರಿ ಬ್ಯಾಗಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಆದ್ದರಿಂದ ತಮ್ಮ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಕಂಡುಬಂದಲ್ಲಿ ದಾಳಿ ನಡೆಸಿ ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳನ್ನು ವಶಪಡಿಸಿಕೊಂಡು ದಂಡ ವಿಧಿಸಿ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯ ನಿಯಮ 2016ರ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕ್ರಿಕೇಟ್ ಪಂದ್ಯದಿಂದ ಕನಕಗಿರಿ ಉತ್ಸವಕ್ಕೆ ಶುಭಾರಂಭ
## ಮಾಧ್ಯಮ ಪ್ರತಿನಿಧಿಗಳಿಂದ ಕೊಪ್ಪಳದಲ್ಲಿ ರೋಚಕ ಕ್ರಿಕೆಟ್ ಪಂದ್ಯ



**ಕೊಪ್ಪಳ :** ಕನಕಗಿರಿ ಉತ್ಸವ-2024ರ ಪ್ರಚಾರಾರ್ಥವಾಗಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಫೆಬ್ರವರಿ 27ರಂದು ಮಾಧ್ಯಮ ಪ್ರತಿನಿಧಿಗಳಿಂದ ರೋಚಕ ಕ್ರಿಕೆಟ್ ಪಂದ್ಯ ನಡೆಯಿತು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಕೊಪ್ಪಳದಲ್ಲಿ ಹಮ್ಮಿಕೊಂಡ ಮಾಧ್ಯಮ ಪ್ರತಿನಿಧಿಗಳ ಕ್ರಿಕೆಟ್ ಪಂದ್ಯದ ಮೂಲಕ ಉತ್ಸವಕ್ಕೆ ಶುಭಾರಂಭವಾಗಿದ್ದು ವಿಶೇಷವಾಗಿತ್ತು. ಡಿ.ಸಿ., ಎಸ್ಪಿ ಅವರಿಂದ ವೀಕ್ಷಣೆ: ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ ಅವರು ಮಂಗಳವಾರ ಬೆಳಗ್ಗೆ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿ ಕ್ರಿಕೆಟ್ ಪಂದ್ಯದಲ್ಲಿ ಪಾಲ್ಗೊಂಡು ಮಾಧ್ಯಮ ಪ್ರತಿನಿಧಿಗಳಿಗೆ ಸ್ಫೂರ್ತಿ ತುಂಬಿದರು. ಇದೆ ವೇಳೆ ಪತ್ರಕರ್ತರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಗ್ರೂಪ್ ಫೋಟೋ ತೆಗೆಸಿಯಿಕೊಂಡು ಸಂಭ್ರಮಿಸಿದರು.

ಇದೆ ವೇಳೆ ಜಿಲ್ಲಾಧಿಕಾರಿಗಳು ಮಾತನಾಡಿ, ಪ್ರತಿನಿತ್ಯ ಸುದ್ದಿಗಾರಿಕೆಯಲ್ಲಿ ನಿರತರಾಗಿರುವ ಮಾಧ್ಯಮ ಪ್ರತಿನಿಧಿಗಳಿಗೆ ಕನಕಗಿರಿ ಉತ್ಸವದ ಅಂಗವಾಗಿ ಕ್ರಿಕೆಟ್ ಏರ್ಪಡಿಸಿದ್ದು, ಇಂತಹ ಕ್ರೀಡೆಗಳಿಂದ ಒತ್ತಡ ನಿವಾರಣೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಇದೆ ವೇಳೆ ಎಲ್ಲಾ ಮಾಧ್ಯಮ ಪ್ರತಿನಿಧಿಗಳಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡ್ರ, ವಾರ್ತಾ ಇಲಾಖೆಯ ಎಂ. ಅವಿನಾಶ, ತಿಪ್ಪಯ್ಯ ನಾಯ್ದು ಎಂ., ಮಾಧ್ಯಮ ಪ್ರತಿನಿಧಿಗಳು, ಕ್ರೀಡಾ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಮೋದ್ ಮುಖಂಡತ್ವದ ತಂಡಕ್ಕೆ ಜಯ: ಕ್ರಿಕೇಟ್ ಪಂದ್ಯದಲ್ಲಿ ಮೊದಲಿಗೆ ಬ್ಯಾಂಟಿಂಗ್ ಆಯ್ದುಕೊಂಡ ಸಿರಾಜ್ ಬಿಸರಳ್ಳಿ ಅವರ ನೇತೃತ್ವದ ಪತ್ರಕರ್ತರ ತಂಡವು 8 ಓವರಗಳಲ್ಲಿ 2 ವಿಕೇಟ್ ನಷ್ಟಕ್ಕೆ 75 ರನ್ ಗಳಿಸಿತು. ಬಳಿಕ ಬ್ಯಾಟಿಂಗ್ ಮಾಡಿದ ಪ್ರಮೋದ್ ಕುಲಕರ್ಣಿ ನೇತೃತ್ವದ ಪತ್ರಕರ್ತರ ತಂಡವು 4 ವಿಕೇಟ್ ನಷ್ಟಕ್ಕೆ 76 ರನ್‌ಗಳನ್ನು ಗಳಿಸುವ ಮೂಲಕ ಗೆಲುವು ಸಾಧಿಸಿತು. ಕೊನೆಯ ಕ್ಷಣದವರೆಗೂ ರೋಚಕತೆಯನ್ನು ಕಾಯ್ದುಕೊಂಡ ಈ ಕ್ರಿಕೆಟ್ ಪಂದ್ಯವು ತುಂಬಾ ಆಕರ್ಷಣೀಯವಾಗಿತ್ತು.

# ನೋಡುಗರ ರೋಮಾಂಚನ ಹೆಚ್ಚಿಸಿದ ಜಟ್ಟಿ ಕಾಳಗ
## ರಣರಣ ಬಿಸಿಲಿನಲ್ಲೂ ಕಡಿಮೆಯಾಗದ ಸಾರ್ವಜನಿಕರ ಉತ್ಸಾಹ



**ಕೊಪ್ಪಳ :** ಕನಕಗಿರಿ ಉತ್ಸವ-2024ರ ಅಂಗವಾಗಿ ಕನಕಗಿರಿಯ ಕಲ್ಮಠ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಹೊಸ ಬಿಲ್ಡಿಂಗ್ ಆವರಣದಲ್ಲಿ ಫೆಬ್ರವರಿ 28ರಂದು ನಡೆದ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ರೋಚಕತೆಯಿಂದ ಕೂಡಿತ್ತು.

ಮದವೇರಿದ ಮದಗಜಗಳಂತಹ ಹುಮ್ಮಸ್ಸು, ಎದುರಾಳಿಯನ್ನು ಕೆಡವಿಹಾಕುವ ಕೆಚ್ಚು, ಭುಜತಟ್ಟಿಕೊಂಡು ಕೈ ಕೈ ಮಿಲಾಯಿಸಿದ ಕುಸ್ತಿಪಟುಗಳು, ಪ್ರತಿಸ್ಪರ್ಧಿಗಳನ್ನು ಮಣಿಸುವ ದೃಶ್ಯ ನೋಡುಗರಲ್ಲಿ ರೋಮಾಂಚನ, ಗೆದ್ದವರಿಗೆ ಚಪ್ಪಾಳೆಯ ಮೆಚ್ಚುಗೆಯು ಕುಸ್ತಿ ಅಖಾಡದಲ್ಲಿ ಕಂಡು ಬಂದಿತು.

ರಣರಣ ಬಿಸಿಲಿನಲ್ಲೂ ಕಡಿಮೆಯಾಗದ ಸಾರ್ವಜನಿಕರ ಉತ್ಸಾಹ: ನೆತ್ತಿಯ ಮೇಲೆ ಸೂರ್ಯ ಆಗಮಿಸಿದ್ದರಿಂದ ಮೇಲೆ ರಣರಣ ಬಿಸಿಲು, ಅಖಾಡದಲ್ಲಿ ಕುಸ್ತಿ ಪಂದ್ಯದ ಬಿಸಿ, ನೆರೆದಿದ್ದ ಸಮೂಹದವರ ಬೆವರಿಳಿಸುತ್ತಿದ್ದರೆ, ಪೈಲ್ವಾನರು ಸಹ ತಮ್ಮ ಎದುರಾಳಿಗಳ ಬೆವರಿಳಿಸುವಲ್ಲಿ ನಿರತರಾಗಿದ್ದ ದೃಶ್ಯ ಎಂಥವರನ್ನೂ ಕುತೂಹಲದಿಂದ ನಿಂತು ವೀಕ್ಷಿಸುವಂತೆ ಮಾಡಿತ್ತು. ಇಂತಹ ರಣರಣ ಬಿಸಿಲಿನಲ್ಲೂ ಸಾರ್ವಜನಿಕರ ಉತ್ಸಾಹಕ್ಕೆ ಯಾವುದೇ ನಿರಾಸಕ್ತಿ ಕಂಡುಬಂದಿಲ್ಲ.

ತುಂಬಾ ರೋಚಕತೆಯಿಂದ ಕೂಡಿದ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಕುಸ್ತಿ ಪಟುಗಳು ಭಾಗವಹಿಸಿದ್ದರು. ಈ ಬಾರಿ ಮಹಿಳಾ ಕುಸ್ತಿಪಟುಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿರುವುದು ಕೂಡ ವಿಶೇಷವಾಗಿತ್ತು. ಒಟ್ಟಾರೆ ಜಟ್ಟಿಗಳ ಕಾಳಗವು ನೋಡುಗರ ರೋಮಾಂಚನವನ್ನು ಹೆಚ್ಚಿಸಿತು.

ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರು ಈ ಕುಸ್ತಿ ಸ್ಪರ್ಧೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಆಹಾರ ಇಲಾಖೆ ಉಪನಿರ್ದೇಶಕರಾದ ಚಿದಾನಂದ, ಉತ್ಸವದ ಕ್ರೀಡಾ ಸಮಿತಿ ಅಧ್ಯಕ್ಷರು ಆಗಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡ್ರ, ಕನಕಗಿರಿ ತಹಶೀಲ್ದಾರರಾದ ವಿಶ್ವನಾಥ ಮುರಡಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಾದ ಚಂದ್ರಶೇಖರ ಕಂದಕೂರ, ಕನಕಗಿರಿ ಪೊಲೀಸ್ ಠಾಣೆಯ ಪಿಐ ಎಂ.ಡಿ.ಫೈಜುಲ್ಲಾ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಕನಕಗಿರಿ ಉತ್ಸವ: ಡಾ.ಪಂಡಿತ್ ಪುಟ್ಟರಾಜ ಗವಾಯಿಗಳ ವೇದಿಕೆಯಲ್ಲಿ ವಿಚಾರಗೋಷ್ಠಿ
## ರಾಜ್ಯಕ್ಕೆ ಚಿರಪರಿಚಿತವಾದ ಇತಿಹಾಸ ಕನಕಗಿರಿಗಿದೆ: ಸಚಿವ ಶಿವರಾಜ ತಂಗಡಗಿ



**ಕೊಪ್ಪಳ:** ಐತಿಹಾಸಿಕ ಪುಣ್ಯಕ್ಷೇತ್ರವಾದ ಕನಕಗಿರಿಯು ರಾಜ್ಯಕ್ಕೆ ಚಿರಪರಿಚಿತವಾದ ಇತಿಹಾಸವನ್ನು ಹೊಂದಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಅವರು ಕನಕಗಿರಿ ಉತ್ಸವ-2024ರ ಅಂಗವಾಗಿ ಶ್ರೀ ಕನಕಾಚಲಪತಿ ದೇವಸ್ಥಾನದ ಹತ್ತಿರ ಸ್ಥಾಪಿಸಿರುವ ಡಾ.ಪಂಡಿತ್ ಪುಟ್ಟರಾಜ ಗವಾಯಿಗಳ ವೇದಿಕೆಯಲ್ಲಿ ಮಾರ್ಚ್ 2ರಂದು ಹಮ್ಮಿಕೊಳ್ಳಲಾಗಿದ್ದ ವಿಚಾರಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನಕಗಿರಿ ಉತ್ಸವ ನಡೆಯುತ್ತಿರುವ ಈ ದಿನ ಬಹಳ ವಿಶೇಷವಾದ ದಿನವಾಗಿದೆ. ಐತಿಹಾಸಿಕ ಕನಕಗಿರಿ ಉತ್ಸವದ ವಿಚಾರಗೋಷ್ಠಿಯಲ್ಲಿ ಉತ್ಸವದ ಆಚರಣೆ ಮಹತ್ವ, ಇತಿಹಾಸದ ಬಗ್ಗೆ ತಿಳಿಸುವಂತಹ ಚರ್ಚೆಗಳಾಗಬೇಕು. ಇದರಿಂದ ಯುವ ಪಿಳಿಗೆಗೆ ನಮ್ಮ ಸಂಸ್ಕೃತಿಯನ್ನು ಕಲಿಸಿದಂತಾಗುತ್ತದೆ. ಕನಕಗಿರಿಯ ರಾಜಾ ಉಡಚಪ್ಪ ನಾಯಕರು ಹಾಗೂ ಕನಕಗಿರಿಯ ಪಾಳೆಗಾರರ ಇತಿಹಾಸ, ಸಾಧನೆಗಳು, ಕೊಡುಗೆಗಳು, ರೈತರ ಪರವಾದ ಅವರ ಚಿಂತನೆಗಳನ್ನು ತಿಳಿಸಲು ಇಂತಹ ವಿಚಾರಗೋಷ್ಠಿಗಳು ಅಗತ್ಯವಾಗಿವೆ. ಕನಕಗಿರಿಯಲ್ಲಿ ನೂರಾರು ದೇವಸ್ಥಾನಗಳಿವೆ 701 ಬಾವಿಗಳಿವೆ, ಅವುಗಳನ್ನು ನೆನಪು ಮಾಡಿಕೊಳ್ಳುವ ಕೆಲಸ ಆಗಬೇಕಿದೆ. ಕನಕಗಿರಿಯು ಐತಿಹಾಸಿಕ ಕ್ಷೇತ್ರವಾಗಿದ್ದು, ವಿಜಯನಗರ ಸಾಮ್ರಾಜ್ಯ ಹಂಪಿಯಲ್ಲಿ ಕನಕಗಿರಿಯ ಹೆಸರಿನ ಒಂದು ಧ್ವಾರವಿದೆ. ಕನಕಗಿರಿ ಕೊಪ್ಪಳಕ್ಕೆ ಮಾತ್ರ ಸೀಮಿವಲ್ಲ. ಇದರ ಚರಿತ್ರೆ ಇಡೀ ರಾಜ್ಯಕ್ಕೆ ಸಂಬಂಧಿಸಿದ್ದಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಹಲವಾರು ಜನ ಸಾಹಿತಿಗಳು, ಬರಹಗಾರರು, ಚಿಂತಕರಿದ್ದಾರೆ. ಅವರಿಗೆ ಅವಕಾಶ ಕಲ್ಪಿಸಿ, ಅವರನ್ನು ಪರಿಚಯಿಸುವ ವೇದಿಕೆ ಕನಕಗಿರಿ ಉತ್ಸವ ಆಗಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ದೊರೆದ ಬಳಿಕ ನನಗೂ ಸಾಮಾಜಿಕ ವಿಚಾರರಗಳು, ಸಂಸ್ಕೃತಿಕ ವಿಚಾರಗಳನ್ನು ಕಲಿಯುತ್ತಿದ್ದೇನೆ ಎಂಬುವುದು ಹೆಮ್ಮೆ ಇದೆ ಎಂದರು.

ಭತ್ತದ ನಾಡು ಗಂಗಾವತಿ ನಮ್ಮ ಹೆಮ್ಮೆ, ಏಷಿಯಾ ಖಂಡದ ಪ್ರಥಮ ರೈಸ್ ಪಾರ್ಕ್ ನವಲಿಯಲ್ಲಿದೆ. ಕನಕಗಿರಿ, ಕಾರಟಗಿ ಹಾಗೂ ಗಂಗಾವತಿ ತಾಲ್ಲೂಕುಗಳ ಅಭಿವೃದ್ಧಿಯ ಚಿಂತನೆಗಳು ಆಗಬೇಕು. ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಗೂ ಚಿಂತನೆಯಾಗಬೇಕು. ಅಂಜನಾದ್ರಿ ಅಭಿವೃದ್ಧಿಗಾಗಿ ಬಜೆಟ್ ನಲ್ಲಿ 100 ಕೋಟಿ ನೀಡಲಾಗಿದ್ದು, ಶೀಘ್ರದಲ್ಲಿ ಅಭಿವೃದ್ಧಿಗಾಗಿ ವೇಗ ನೀಡಲಾಗುವುದು ಎಂದು ಹೇಳಿದರು. ಫಲಪುಷ್ಪ ಪ್ರದರ್ಶನಕ್ಕೆ ಮೆಚ್ಚುಗೆ: ಈ ವಿವಾರಗೊಷ್ಠಿಯಲ್ಲಿ ಜಿಲ್ಲೆಯ ಕೃಷಿ, ತೋಟಗಾರಿಕೆ, ನೀರಾವರಿ ಅಭಿವೃದ್ಧಿಯ ಚಿಂತನೆಗಳು, ಚರ್ಚೆಗಳು ನಡೆಯಬೆಕಿದ್ದು, ಈ ಹಿನ್ನೆಲೆಯಲ್ಲಿ ತೋಟಗಾರಿಕೆ ಇಲಾಖೆಯಿಂದ ಕನಕಗಿರಿ ಉತ್ಸವದಲ್ಲಿ ಹಮ್ಮಿಕೊಳ್ಳಲಾದ ಫಲಪುಷ್ಪ ಪ್ರದರ್ಶನವು ತುಂಬಾ ಚನ್ನಾಗಿ ಆಯೋಜನೆ ಮಾಡಲಾಗಿದೆ ಎಂದು ತೋಟಗಾರಿಕೆ ಇಲಾಖೆ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಸಚಿವರು, ಎಲ್ಲಾ ಸಾರ್ವಜನಿಕರು ವಿಶೇಷವಾಗಿ ರೈತರು ಈ ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಸಮಾನಾಂತರ ಜಲಾಶಯಗಳು ನಿರ್ಮಾಣ ಆದರೆ ನೀರಾವರಿ, ಪೂರ್ಣ ಪ್ರಮಾಣದ ಒಣಬೇಸಾಯಕ್ಕೆ ಒಳಿತಾಗಲಿದೆ. ನೀರಿನ ವಿಚಾರದಲ್ಲಿ ಯಾವುದೇ ತಡೆ ಬೇಡ. ಸಮನಾಂತರ ಶಲಾಶಯಗಳಿಂದ ಏತ ನೀರಾವರಿಗೆ ಸಹಕಾರಿಯಾಗಲಿದೆ. ಇದರಿಂದ ಈ ಭಾಗವು ಸಂಪೂರ್ಣ ನೀರಾವರಿ ಪ್ರದೇಶವಾಗಲಿದೆ. ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಗುರುತಿಸಿ ಅವರಿಗೆ ಗೌರವ ಸಲ್ಲಿಸುವ ಕೆಲಸವನ್ನು ಮಾಡಿದ ಹೆಮ್ಮೆ ನಮ್ಮ ಸರ್ಕಾರಕ್ಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಸವಣ್ಣ ಅವರ ಮಾದರಿಯಲ್ಲೇ ಹೆಜ್ಜೆ ಇಟ್ಟಿದ್ದಾರೆ ಎಂದು ಹೇಳಿದರು. ಕನಕಗಿರಿ ತಾಲ್ಲೂಕಿನ ಸಾಹಿತ್ಯ ಪರಿಷತ್ತನ ಅಧ್ಯಕ್ಷರು ಮೆಹಬೂಬ ಹುಸೇನ ಅವರು ಆಶಯನುಡಿಗಳನ್ನಾಡಿದರು. ಹಗರಿಬೊಮ್ಮನಹಳ್ಳಿಯ ಸಾಹಿತಿ ಡಾ.ಡಿ.ಕೆ ಮಾಳೆ ಅವರು ಕನಕಗಿರಿ ಪಾಳೆಗಾರರ ಕೊಡುಗೆ ಕುರಿತು, ಕೊಪ್ಪಳದ ಗವಿಸಿದ್ದೇಶ್ವರ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಶರಣಪ್ಪ ಬಿಳಿಎಲಿ ಅವರು ಗಂಗಾವತಿ, ಕನಕಗಿರಿ, ಕಾರಟಗಿ ತಾಲ್ಲೂಕುಗಳ ಅಭಿವೃದ್ಧಿ ಅವಲೋಕನ ನಿನ್ನೆ-ಇಂದು-ನಾಳೆ ಎಂಬ ವಿಷಯದ ಬಗ್ಗೆ, ಗಂಗಾವತಿಯ ಸಾಹಿತಿ ಪವನಕುಮಾರ್ ಗುಂಡೂರು ಅವರು ಕನಕಗಿರಿ ಕಲೆ ಹಾಗೂ ಸಾಹಿತ್ಯ ಪರಂಪರೆ ಕುರಿತು, ಗಂಗಾವತಿಯ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ.ಬದರಿ ಪ್ರಸಾದ ಅವರು ಕೊಪ್ಪಳ ಜಿಲ್ಲೆಯ ಕೃಷಿ ನೀರಾವರಿ ಹಾಗೂ ತೋಟಗಾರಿಕೆ ಅಭಿವೃದ್ಧಿಯ ಅವಲೋಕನ ಬಗ್ಗೆ, ಕೂಡ್ಲಗಿಯ ಸಾಹಿತಿ ಡಾ.ಇಮಾಮ್ ಸಾಹೇಬ್ ಹಡಗಲಿ ಅವರು ಕನಕಗಿರಿ ಚರಿತ್ರೆ, ವಾಸ್ತುಶಿಲ್ಪ ಹಾಗೂ ರಂಗಭೂಮಿ ಪರಂಪರೆ ಎಂಬ ವಿಷಯ ಮಂಡನೆ ಮಾಡಿದರು. ಗಂಗಾವತಿಯ ಪ್ರಾಚಾರ್ಯರು ಡಾ.ಶರಣಪ್ಪ ಕೋಲ್ಕಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕನಕಗಿರಿಯ ಚಿಂತಕರಾದ ಕೆ.ಚನ್ನಬಸಯ್ಯಸ್ವಾಮಿ ಹಾಗೂ ದುರ್ಗಾದಾಸ್ ಯಾದವ್, ಗಂಗಾವತಿಯ ಉಪನ್ಯಾಸಕರಾದ ನಾರಾಯಣ ಕಂದಗಲ್, ಕನಕಗಿರಿಯ ಸಂಶೋಧಕರಾದ ನಾಗೇಶ ಪೂಜಾರ, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಕಿರಣ ಸಿಂಗ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State